ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಒಂದು ಪ್ರಾಮುಖ್ಯವಾದ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇತ್ತೀಚೆಗೆ ಆಂಧ್ರ ರಾಜ್ಯದ ಪಾರ್ಲಿಮೆಂಟ್ ಸದಸ್ಯರುಗಳು ನಾಗಾರ್ಜುನ ಸಾಗರದ ವಿಚಾರದಲ್ಲಿ ಕೇಂದ್ರಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟು, ನಾಗಾರ್ಜುನ ಸಾಗರದ ಮುಂದಿನ ಕೆಲಸಕ್ಕೆ ಅನುಮತಿ ಕೊಡಬೇಕೆಂದು ಅದರಲ್ಲಿ ತಿಳಿಸಿದ್ದಾರೆ. ಆದ್ದರಿಂದ ಮೈಸೂರು ಸರ್ಕಾರ ಈ ವಿಚಾರದಲ್ಲಿ ತೀವ್ರತೆಯಿಂದ ಈ ಸಭೆಯ ಮುಖಾಂತರ ಕೇಂದ್ರ ಸರ್ಕಾರಕ್ಕೆ ಒಂದು ನಿರ್ಣಯ ಮಾಡಿ ಕಳಿಸಿಕೊಡಬೇಕು. ಕೇಂದ್ರದಲ್ಲಿರುವ ನೀರಾವರಿ ಮಂತಿಗಳು ಆಂಧ್ರದವರ ಪ್ರಭಾವಕ್ಕೆ ಒಳಗಾಗಿ, ಲೋಕಸಭೆಯ ಸದಸ್ಯರನ್ನು ಎತ್ತಿಕಟ್ಟಿ ಈ ರೀತಿಯ ಒಂದು ಮನವಿಯನ್ನು ಕೊಡಿಸುತ್ತಿರಬಹುದು ಎನ್ನುವಂಥ ಅನುಮಾನ ಉಂಟಾಗುತ್ತಿದೆ, ಈ ಸನ್ನಿವೇಶದಲ್ಲಿ ಈ ಸಭೆಯ ಸದಸ್ಯರ ಒಮ್ಮತದ ಒಂದು ನಿರ್ಣಯವನ್ನು ಮಾಡಿ ಕೇಂದ್ರಸರ್ಕಾರಕ್ಕೆ ಎಚ್ಚರಿಕೆಯ ರೂಪದಲ್ಲಿ ಕಳಿಸಿಕೊಡಬೇಕು. ಅತಿ ಶೀಘ್ರವಾಗಿ ಈ ವಿಚಾರವನ್ನು ಇತ್ಯರ್ಥ ಮಾಡಬೇಕಾಗಿದೆ, ನಾಗಾರ್ಜುನ ಸಾಗರದ ಎರಡನೆಯ ಹಂತವನ್ನು ಅವರು ಪ್ರಾರಂಭ ಮಾಡಿದರೆ, ಆ ಬಗ್ಗೆ ನಾವು ತೀವ್ರತೆಯಿಂದ ಯೋಚನೆಮಾಡಿ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು, ಅದನ್ನು ಕೇಂದ್ರಸರ್ಕಾರಕ್ಕೆ ತಿಳಿಸತಕ್ಕದ್ದು ಈ ಸಭೆಯ ಕರ್ತವ್ಯವೆಂದು ಹೇಳುತ್ತೇನೆ. ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೂ ಈ ವಿಚಾರ ತಿಳಿದುಬಂತು. ಆಂಧ್ರ ರಾಜ್ಯದ ಪಾರ್ಲಿಮೆಂಟ್ ಸದಸ್ಯರು ಒಂದು ಮನವಿಯನ್ನು ಕೊಟ್ಟಿದ್ದಾರೆಂದು ತಿಳಿಯಿತು. ಆ ಸದಸ್ಯರುಗಳಲ್ಲಿ ನಮ್ಮ ಮೈಸೂರು ಸದಸ್ಯರು ಒಬ್ಬರು ಸೇರಿದ್ದಾರೆಂದು ಗೊತ್ತಾಯಿತು. ನನಗೆ ಆಶ್ಚರ್ಯವಾಯಿತು. ಅವರು ಇಡೀ ಭಾರತವೆಲ್ಲಾ ಒಂದೇ ಎಂದು ತಿಳಿದಿರಬಹುದು. ಶ್ರೀ ಶಿವಪ್ಪನವರು ಹೇಳಿರುವ ವಿಚಾರದ ಬಗ್ಗೆ ನಾನು ವಿಚಾರ ಮಾಡುತ್ತೇನೆ. ನಮ್ಮ ಪಾರ್ಲಿಮೆಂಟ್ ಸದಸ್ಯರುಗಳು ಸಹ ಈ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳದಿದ್ದರೆ ಏನು ಮಾಡುತ್ತೇವೆ ಎಂಬುದನ್ನು ಸಂಬಂಧಪಟ್ಟ ಮಂತ್ರಿಯವರಿಗೆ ತಿಳಿಸಿದ್ದಾರೆ. ಶ್ರೀ ಶಿವಪ್ಪನವರು ಹೇಳಿದ ವಿಷಯ ಆಲೋಚನೆ ಮಾಡುವಂಥ ವಿಚಾರ. ಈ ಬಗ್ಗೆ ನನ್ನ ಸಂಬಂಧಪಟ್ಟ ಮಂತ್ರಿಗಳು ಏನು ಕ್ರಮ ತೆಗೆದು ಕೊಳ್ಳುತ್ತೇವೆ ಎಂಬುದನ್ನು ತಿಳಿಸಿದ್ದಾರೆ.

BUDGET ESTIMATES FOR 1967-68—DEMANDS FOR GRANTS—
Demand Nos. 10, 14, 16, 20, 24 and 44.

MR. DEPUTY SPEAKER.—The hon'ble Chief Minister will move demand No. 10

Sri S. NIJALINGAPPA (Chief Minister).—Sir, on the recommendation of the Governor, I beg to move:

> "That a sum not exceeding Rs. 3,93,63,000 be granted to the Government to defray the charges which will come in course of payment during the financial year for the period ending 31st day of March 1968 in respect of 'General Administration'."

The other Demands also many be taken as read.

MR. DEPUTY SPEAKER.—Motion moved On the recommendation of the Governor:

> "That a sum not exceeding Rs. 3,93,60,000 be granted to the Government to defray the charges which will come in course of payment during the financial year for the period ending 31st day of March 1963 in respect of 'General Administration'."

The other Demands 14, 16, 20, 24 and 44 are also deemed to have been moved.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನೂ ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಈ ಸಭೆಯ ಮುಂದೆ ಹೇಳಲಿಚ್ಛಿಸುತ್ತೇನೆ. ನೆನ್ನೆ ದಿವಸ ನನ್ನ ದೃಷ್ಟಿಯಿಂದ ನಾನು ಹೇಳಿದೆ, ಬಹಳ ಸಂತೋಷದ ದಿವಸವೆಂದು. ಈ ಕಡೆಯ ಶ್ರೀಮಾನ್ ಚೆನ್ನಬಸಣ್ಣನವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಏನು ಕಾರಣವೋ ಬಸವಣ್ಣನನ್ನು ನೆನೆಸಿಕೊಂಡರು. ಈ ದಿನ ನಾನು ಭಾಷಣವನ್ನು ಪ್ರಾರಂಭ ಮಾಡುವ ಮುನ್ನ ಬಸವಣ್ಣನವರ ಒಂದು ವಚನ ಹೇಳಿ ಪ್ರಾರಂಭ ಮಾಡುತ್ತೇನೆ :

> ''ನೂರು ಓದಿ, ನೂರು ಕೇಳಿ ಫಲವೇನು ? ಆಸೆ ಹೋಗದು ? ರೋಷ ಬಿಡದು, ದ್ವೇಷ ಬಿಡದು, ಮಾತಿನಂತೆ ಮನವಿಲ್ಲದ ? ಜಾತಿ ಡೊಂಬರನ ನಮ್ಮ ಕೂಡಲ ಸಂಗಮದೇವ ನೆಚ್ಚ ?''

ಈಗ ಏನಾಗಿದೆಯೆಂದರೆ, ನಿಮಗೆ ನಮ್ಮ ಮೇಲೆ ರೋಷವಿದೆ.

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಮೇಲೆ ನಮಗೆ ರೋಷವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಕಷ್ಟ ಬಂದಿರುವುದೇನೆಂದರೆ, ಅರ್ಜುನನು ರೇಗಿಸಬೇಕಾದರೆ ಅವನನ್ನು ಮೊದಲು ಹೀಯಾಳಿಸಬೇಕಾಗುತ್ತದೆ. ಅರ್ಜುನನನ್ನು ಹೀಯಾಳಿಸಿಬಿಟ್ಟರೆ ಅವನಲ್ಲಿರತಕ್ಕ ತೇಜಸ್ಸು ಹೊರಬೀಳುವಂತೆ, ನಾವಿಲ್ಲಿ ನಮ್ಮ ಮುಖ್ಯ ಮಂತ್ರಿಗಳನ್ನು ಹೀಯಾಳಿಸಿದರೆ, ಇವರನ್ನು ರೇಗಿಸಿದರೆ ನಮ್ಮ ಕೆಲಸಗಳೆಲ್ಲಾ ಆಗುತ್ತವೆಯಲ್ಲ ಎಂದು ನಾವೇನು ಮಾಡಿದರೂ, ಏನು ಹೇಳಿದರೂ ಅವರಿಗೆ ಕೋಪ ಅನ್ನುವುದು ಬರುವುದೇ ಇಲ್ಲ. ದೇವರು ಅವರಿಗೆ ಅಂಥಾ ಒಂದು ವಜ್ರಕವಚವನ್ನು ದಯಪಾಲಿಸಿದ್ದಾನೆ. ದೇವರು ಅವರಿಗೆ ಯಾವಾಗಲೂ ಹಸನ್ಮುಖಿಗಳಾಗಿರುವಂತೆ ಒಂದು ವಜ್ರ ಕವಚವನ್ನು ಕೊಟ್ಟಿದ್ದಾನೆ. ನಾವು ಏನು ಹೇಳಿದರೂ ಅವರಿಗೆ ಕೋಪವೆನ್ನುವುದೇ ಬರುವುದಿಲ್ಲ; ಆಗಲೂ ಹಸನ್ಮುಖಿಗಳಾಗೇ ಇರುತ್ತಾರೆ. ಇವರನ್ನು ರೇಗಿಸಿದರೆ ದೇಶಕ್ಕೇನಾದರೂ ಒಂದು ಒಳ್ಳೆಯದಾದೀತಲ್ಲವೇ, ದೇಶಕ್ಕೆ ಒಂದು ಕಲ್ಯಾಣವಾದೀತು ಅವರಿಗೆ ಕೋಪ ಬಂದರೆ ಎಂಬುದು ನಮ್ಮ ಆಸೆ. ಅವರು ಹಿಂದೆ ದೇಶದಲ್ಲಿ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರ ಬಗ್ಗೆ ನಮಗೇನೂ ಅಂಥಾ ಆಕ್ರೋಶಗಳಿರುವುದಿಲ್ಲ. ಆದರೆ ಇತ್ತೀಚೆಗೆ ಇವರ ಆಡಳಿತದಲ್ಲಿ ಆಗಬಾರದಂಥ ಕೆಲಸಗಳಾಗುತ್ತಿವೆ, ಬಹಳ ಅನ್ಯಾಯಗಳಾಗುತ್ತಿವೆ, ಇದರಿಂದ ದೇಶಕ್ಕೆ ಬಹಳ ಕೇಡುಕಾಗುತ್ತಿದೆ. ಹೀಗಾಗಬಾರದಲ್ಲ ಎಂದು ನಾವು ಇವರನ್ನು ಎಚ್ಚರಿಸುವುದಕ್ಕೆ ಟೀಕೆಗಳನ್ನು ಮಾಡಲೇಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಸಾಮಾನ್ಯವಾಗಿ ಬಹಳ ಶಾಂತ ಸ್ವಭಾವದವರು, ಇವರ ಒಳ್ಳೆಯ ಸ್ವಭಾವವನ್ನು ಅನೇಕರು ಈ ದಿವಸ ದುರುಪಯೋಗಪಡಿಸಿಕೊಳ್ಳುತ್ತಿರುವುದರಿಂದ ದೇಶ ಆರ್ಥಿಕವಾಗಿಯೂ ನೈತಿಕವಾಗಿಯೂ ಹಿಂದಕ್ಕೆ ಹೋಗುತ್ತಿದೆ. ಇವರ ಹೆಸರನ್ನು ದುರುಪಯೋಗಪಡಿಸಿಕೊಳ್ಳತಕ್ಕ ಜನರು ಕೆಲವರಿದ್ದಾರೆ. ಅತ್ತಕಡೆಗೆ ಇವರು ತಮ್ಮ ಗಮನವನ್ನು ಹರಿಸಿಲ್ಲ. ರಾಜ್ಯದ ಅಭ್ಯುದಯಕ್ಕೆ ಅತಿಮುಖ್ಯವಾದಂಥ ಮೂರು ಬಾಬುಗಳನ್ನು ಅಂದರೆ ರಾಜ್ಯದ ಆಡಳಿತವಿಭಾಗ, ಕೈಗಾರಿಕೆ ಮತ್ತು ವ್ಯವಸಾಯ ಈ ಮೂರು ಬಾಬುಗಳನ್ನು ನಮ್ಮ ಮುಖ್ಯ ಮಂತ್ರಿಗಳು, ಆ ಆದಿಶೇಷನು ಭೂಮಿಯನ್ನೇ ತನ್ನ ಹೆಗಲ ಮೇಲೆ ಹೊತ್ತಿರುವಂತೆ ಇವರೂ ಈ ಮೂರು ಬಾಬುಗಳನ್ನು ತಮ್ಮ ಹೆಗಲಮೇಲೆ ಹೊತ್ತಿದ್ದಾರೆ. ಆದರೆ ಆ ಹೆಗಲು ಇಷ್ಟೆಲ್ಲಾ ಭಾರವನ್ನು ಅದು ಹೊರಲಾರದು. ಆ ಭುಜಕ್ಕೆ ಇಷ್ಟು ಭಾರವನ್ನು ಹೊರತಕ್ಕ ಶಕ್ತಿಯಿಲ್ಲ. ನಾನು ಈ ಮಾತನ್ನು ಹೇಳಿದರೆ ಆಡಳಿತ ಪಕ್ಷದಲ್ಲಿ ಒಂದು ಡಿವೈಡ್ ಅಂಡ್ ರೂಲ್ ಪಾಲಿಸಿ ಮಾತನಾಡುತ್ತಿದ್ದಾನೆ ಎಂದು ತಾವುಗಳ್ಯಾರೂ ಭಾವಿಸಬಾರದು. ಒಂದು ಬಾಬಿನಲ್ಲಿ ಅಲ್ಲ, ರಾಜ್ಯದಲ್ಲಿ ತಾವು ಯಾವ ಬಾಬನ್ನೇ ತೆಗೆದುಕೊಂಡರೂ ಅಲ್ಲಿ ಕಗ್ಗತ್ತಲೆ ಕವಿದಿದೆ. ಒಂದಾನೊಂದು ಕಾಲದಲ್ಲಿ ಈ ಒಂದು ಚಿಕ್ಕ ಪುಟ್ಟ ರಾಜ್ಯವಾದ ಮೈಸೂರು ಕೈಗಾರಿಕೆಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಇಲ್ಲ ಸ್ಥಾಪನೆ ಮಾಡಿದುದರಿಂದ ಇದನ್ನು ಮ್ಯಾಂಚೆಸ್ಟರ್ ಆಫ್ ಇಂಡಿಯಾ ಎಂದು ಹೇಳಲಾಗುತ್ತಿತ್ತು; ಅಂಥ ಒಂದು ಹೆಸರುವಾಸಿಯನ್ನು ಈ ರಾಜ್ಯ ಗಳಿಸಿತ್ತು. ಆ ಕಾಲದಲ್ಲಿ ಇಲ್ಲ ದಿವಾನರಾಗಿದ್ದ ಸರ್. ಶೇಷಾದ್ರಯ್ಯರ್ ಮತ್ತು ಸರ್. ಎಂ. ವಿಶ್ವೇಶ್ವರಯ್ಯನವರು ಇಂಥ ಗಣ್ಯ ಮಹನೀಯರು ಬಹಳ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಆದುದರಿಂದಲೇ ಈ ರಾಜ್ಯದಲ್ಲಿ ಬಹಳ ಹಿಂದಿನಿಂದಲೂ ಅನೇಕ ಕೈಗಾರಿಕೆಗಳು ಬೆಳೆಯುವುದಕ್ಕೆ ಅವಕಾಶವಾಯಿತು. 1898ರಲ್ಲಿ ಇಡೀ ಪೂರ್ವ ಏಷ್ಯಾದಲ್ಲಿಯೇ ಪ್ರಪ್ರಥಮವಾಗಿ ವಿದ್ಯುಚ್ಛಕ್ತಿಯನ್ನು ತಯಾರಿಸಿದ ಕೀರ್ತಿ ಈ ಮೈಸೂರು ರಾಜ್ಯಕ್ಕೆ ಸೇರಿದ್ದಾಗಿದೆ. ಆ ಕಾಲದಲ್ಲಿ 82 ಮೈಲಿಗಳ ದೂರ ವಿದ್ಯುಚ್ಛಕ್ತಿಯ ಟ್ರಾನ್ಸ್‌ಮಿಷನ್ ಲೈನನ್ನು ಎಳೆದುಕೊಂಡು ಹೋಗಿ ಇಲ್ಲಿ ಅಷ್ಟು ಕೈಗಾರಿಕೆಗಳನ್ನು ಮುಂದುವರಿಸಿದ್ದಂಥ ಮಹನೀಯರು ಇಲ್ಲಿ ಇದ್ದು ಕೆಲಸಮಾಡಿದ್ದಾರೆ. ಹಿಂದೆ ಇದ್ದ ಆ

ಮಹನೀಯರುಗಳೆಲ್ಲಾ ಏನು ಅಂಥಾ ಅದ್ಭುತ ಕೆಲಸಗಳನ್ನು ಮಾಡಿದ್ದರೋ ಅಂಥಾ ಮೈಸೂರು ರಾಜ್ಯದಲ್ಲಿ ಈ ದಿವಸ ಕೈಗಾರಿಕೆಯಲ್ಲಿ ಈ ರಾಜ್ಯ ಹಿಂದೆ ಬಿದ್ದಿದೆಯಲ್ಲಾ, ಎಂಬ ವಿಚಾರದಲ್ಲಿ ಒಂದು ಕಡೆ ರೋಷವನ್ನುಂಟುಮಾಡುತ್ತಿದ್ದರೆ ಇನ್ನೊಂದು ಕಡೆ ವ್ಯಸನವನ್ನೂ ಉಂಟುಮಾಡುತ್ತಿದೆ ಎಂದು ಹೇಳಲಿಚ್ಛಿಸುತ್ತೇನೆ. ಹಾಗೆ ನಾನಾ ಮುಖನಾಗಿ ಅಭಿವೃದ್ಧಿಯಾಗುತ್ತಿದ್ದ ರಾಜ್ಯವನ್ನು ಈ ದಿವಸ ಅದೇನೋ ಹೇಳುತ್ತಾರಲ್ಲಾ ಹೇಡಿಯ ಕೈಗೆ ವಜ್ರಾಯುಧವನ್ನು ಕೊಟ್ಟಹಾಗಾಯಿತು ಎಂದು ಹೇಳುವಂತೆ ಇವರ ಕೈಗೆ ಕೊಡಲಾಯಿತಲ್ಲಾ, ಇದಕ್ಕೇನು ಮಾಡಬೇಕು, ಇದನ್ನು ಪಾರುಮಾಡತಕ್ಕ ಬಗೆ ಹೇಗೆ ಎಂಬುದನ್ನು ಕಾಣದೆ ಸಂಕಟದಲ್ಲಿ ಬಿದ್ದು ಹೊರಳಾಡತಕ್ಕ ಪ್ರಸಂಗವುಂಟಾಯಿತಲ್ಲಾ ಎಂದು ವ್ಯಸನ ಪಡಬೇಕಾಗಿದೆ. ಈ ದೇಶ ಇವರ ಆಡಳಿತ ಕಾಲದಲ್ಲಿ ಈ ಕೈಗಾರಿಕೆಗಳಲ್ಲಿ ಯಾವ ರೀತಿ ಮುಂದುವರಿಯುತ್ತಿದೆ ಎಂಬುದನ್ನು ತಿಳಿಸುವುದಕ್ಕಾಗಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಆದರೆ ನಾನೀಗ ಮೊದಲನೆಯದಾಗಿ ಸಾಮಾನ್ಯ ಆಡಳಿತದ ವಿಚಾರವಾಗಿ ಒಂದೆರಡು ಮಾತುಗಳನ್ನಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ದಿವಸ ಈ ಬಾಬು ಮಾನ್ಯ ಮುಖ್ಯ ಮಂತ್ರಿಗಳ ಕೈಲಿದೆ. ಈ ಆಡಳಿತವನ್ನು ಯಾರಾದರೂ ಒಬ್ಬರು ಇಟ್ಟುಕೊಳ್ಳಲೇಬೇಕು. ಅದರಂತೆ ಇದನ್ನು ಇವರು ಇಟ್ಟುಕೊಂಡಿದ್ದಾರೆ. ಈ ದಿವಸ ಸರ್ಕಾರಿ ಆಫೀಸುಗಳಲ್ಲಿ ಕೆಲಸಮಾಡತಕ್ಕ ಜನರು ಯಾವ ಒಂದು ಲಂಗೂ ಲಗಾಮೂ ಇಲ್ಲದಂತೆ ಕೆಲಸಮಾಡುತ್ತಿದ್ದಾರೆ. ಇದಕ್ಕೆ ಅನೇಕ ನಿದರ್ಶನಗಳಿವೆ. ಹಿಂದೆ ಒಂದು ಕಾಲದಲ್ಲಿ ನಮ್ಮ ಅಧಿಕಾರಿಗಳ ವಿಚಾರದಲ್ಲಿ ಒಂದು ಹೆಮ್ಮೆಪಡತಕ್ಕ ಕಾಲವೂ ಇತ್ತು. ಈ ದಿವಸ ಯಾರೂ ಯಾರ ಬೆನ್ನ ಹಿಂದೆಯೂ ಮಾತನಾಡತಕ್ಕ ಅವಕಾಶವಿಲ್ಲ. ಆದರೆ ನಾನು ಒಂದು ಮಾತನ್ನು ಹೇಳುವುದಾದರೆ—ಮನೆಯಲ್ಲಿರತಕ್ಕ ಹೆಂಗಸರು ಸರಿಯಾಗಿ ಅಡಿಗೆಯನ್ನು ಮಾಡಿ ಹಾಕದಿದ್ದರೆ ನಮ್ಮ ಯಜಮಾನರು ಮನೆಗೆ ಬಂದಾಗ ಏನು ಮಾಡುತ್ತಾರೋ ಎಂಬ ಭೀತಿ ಅಥವಾ ಒಂದು ಹೆದರಿಕೆ ಅವರಲ್ಲಿದ್ದರೆ ಅವರು ಅಡಿಗೆಯನ್ನು ಸರಿಯಾಗಿಯೇ ಮಾಡಿ ಹಾಕುತ್ತಾರೆ. ಅದೇ ರೀತಿಯಾಗಿ ಈ ದಿವಸ ಇಲ್ಲಿ ಸಾಲಾಗಿ ಕುಳಿತಿರತಕ್ಕ ಮಂತ್ರಿಗಳು ಏನಿದ್ದಾರೆ ಅವರೂ ಕೂಡ ಅದೇ ರೀತಿಯಾಗಿ ತಮ್ಮ ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳನ್ನು ಆಗಾಗ್ಗೆ ಕರೆಸಿ ಅವರಿಗೆ ಒಪ್ಪಿಸಿರತಕ್ಕ ಕೆಲಸಕಾರ್ಯಗಳು ಯಾವ ರೀತಿ ನಡೆಯುತ್ತಿವೆ ಎಂಬುದರ ಬಗ್ಗೆ ತಮ್ಮ ಒಂದು ದಕ್ಷತೆ, ದರ್ಪ ಹಾಗೂ ಅಧಿಕಾರವಾಣಿಯಿಂದ ಕೇಳಿ, ಅದರಲ್ಲಿ ಯಾರಾದರೂ ಅಶ್ರದ್ಧೆಯಿಂದ ತಪ್ಪುಮಾಡಿದ್ದರೆ ಅಂಥವರಿಗೆ ತಕ್ಕ ಬರೆಯನ್ನೆಳೆದಿದ್ದರೆ ಅದು ಎಲ್ಲಾ ಸರಿಹೋಗುತ್ತಿತ್ತು. ಆದರೆ ಅಂಥ ಒಂದು ಬಿಕ್ಕಟ್ಟನ್ನು ಇವರು ಇಟ್ಟುಕೊಳ್ಳದೆ ಹೋದುದರಿಂದ ಈ ದಿವಸ ಯಾವ ಆಫೀಸಿನಲ್ಲಿ ನೋಡಲಿ ಕೆಲಸ ಮಾಡಿದರೆ ಮಾಡಿದರು, ಬಿಟ್ಟರೆ ಬಿಟ್ಟರು. ಆಫೀಸುಗಳಲ್ಲಿ ನೌಕರರು ಸೇರಿದಕೂಡಲೆ ಅಷ್ಟೋ ಇಷ್ಟೋ ಅಡಾವುಡಿ ಮಾತುಗಳನ್ನಾಡಿಕೊಂಡು ಕಾಲವನ್ನು ಕಳೆದರೆ ಅಲ್ಲಿಗೆ ನಮ್ಮ ಕೆಲಸವಾಯಿತು ಎಂದು ಹೊರಟು ಹೋಗುತ್ತಿದ್ದಾರೆ. ಇವರು ಪ್ರತಿಯೊಬ್ಬ ಅಧಿಕಾರಿಯನ್ನೂ ಹಾಗೂ ನೌಕರರನ್ನೂ ತಮ್ಮ ಸ್ಥಾನಕ್ಕೆ ಕರೆಸಿಕೊಂಡು ನೀವು ಈ ದಿವಸ ಇಂಥಾ ಕೆಲಸವನ್ನು ಮಾಡಿ ಮುಗಿಸಲೇಬೇಕು, ಎಂದು ಬಿಗಿಯನ್ನು ಇಟ್ಟುಕೊಂಡಿದ್ದರೆ, ಈಗಿನಂತೆ ಸಡಿಲ ಬಿಡದಿದ್ದರೆ ಹೀಗಾಗುತ್ತಿರಲಿಲ್ಲ. ಈ ದಿನ ಕೀಲಿಲ್ಲದ ಗಾಡಿಯಲ್ಲಿ ಪ್ರಯಾಣ ಮಾಡಿದಂತೆ ಆಗಿದೆ ನಮ್ಮ ಆಡಳಿತದ ವೈಖರಿ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಏನು ಮಾಡುವುದು ನಾವು ಕೇಳಿದರೇನೇ ನಮಗೇ ಫೈಲ್ ಸಿಕ್ಕುವುದಿಲ್ಲವೆಂದು ಹೇಳಿದರು. ಯಾರಾದರೂ ಅಧಿಕಾರಿ ತಪ್ಪು ಮಾಡಿದನೆಂದರೆ ಎಲ್ಲರಿಗೂ ಶಿಕ್ಷೆಮಾಡಕೂಡದು. ತಪ್ಪುಮಾಡಿದವರನ್ನು ಮೊದಲು ಹಿಡಿದು ಅವರಿಗೆ ಶಿಕ್ಷೆಮಾಡಬೇಕು. ದಾರಿ ತಪ್ಪಿದವರಿಗೆ ನಿಜವಾಗಿ ಇವರು ಶಿಕ್ಷೆಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಆ ಕಡೆಗೆ ಇವರ ಗಮನ ಸೆಳೆಯಬೇಕು. ಒಂದು ಉದಾಹರಣೆ ಹೇಳಬೇಕಾದರೆ, ಬೇಸಾಯಮಾಡುವವನು ಎರಡು ಎತ್ತುಗಳನ್ನು ಓಡಿಸುವಾಗ ಅವನೇನಾದರೂ ಒಂದು ಎತ್ತಿಗೆ ಏಟು ಹೊಡೆದರೆ, ಇನ್ನೊಂದು ಎತ್ತು ತನ್ನ ಮಗ್ಗುಲ ಎತ್ತಿಗೆ ಏಟು ಬಿದ್ದರೆ ನನಗೂ ಏಟು ಬೀಳುತ್ತದೆ ಎಂಬ ಭಯವನ್ನು ಹೊಂದಿರುತ್ತದೆ. ಆ ರೀತಿಯಾದಂಥ ಭಯ ಇವತ್ತು ಆಡಳಿತದಲ್ಲಿಲ್ಲ. ಯಾರೇ ಆಗಲಿ ಏನು ಬೇಕಾದರೂ ಮಾಡಬಹುದು ಎಂಬತಕ್ಕಂಥ ಅಭಿಪ್ರಾಯ ಈಗ ಬಂದಿದೆ. ನಮ್ಮ ನೀತಿ ಏನು, ಸತ್ಯವಂತರಿಗೆ, ನಿಷ್ಠಾವಂತರಿಗೆ ಉತ್ಸಾಹಶಾಲಿಗಳಿಗೆ ಪ್ರೋತ್ಸಾಹ ಕೊಡಬೇಕೆಂಬುದು. ಈಗ ನಿಮ್ಮ ನೀತಿ ಏನಾಗಿದೆ, ನೆಪಾಟಿಸಂ, ತಮಗೆ ಬೇಕಾದವರನ್ನು ಎತ್ತುವುದು, ಬೇಕಿಲ್ಲದಿರುವವರನ್ನು ಕೆಳಕ್ಕೆ ಹಾಕುವುದು—ಇಂತಹ ಮನೋಭಾವದಿಂದ ಅಧಿಕಾರಿಗಳಲ್ಲಿ ನಿರುತ್ಸಾಹ ಬಂದಿದೆ.

10-00 A.M.

ಮೈಸೂರು ಸಿವಿಲ್ ಸರ್ವಿಸ್ ವಿಚಾರದಲ್ಲಿ ಒಂದು ವಿಷಯ. ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ವಿಷಯದಲ್ಲಿ ಬಂದ ಮಾತು ... ನಮ್ಮ ಡುವ್ವೃವ, ... ಎಫಿಷಿಯಂಟ್ ಆಗಿರತಕ್ಕ

(ಶ್ರೀ ಹೆಚ್. ಸಿದ್ಧವೀರಪ್ಪ)

ಅಧಿಕಾರಿಗಳನ್ನು ನಾವು 1956ನೇ ಇಸವಿಯಲ್ಲಿಯೇ ಈ ರಾಷ್ಟ್ರ ದೊಡ್ಡದಾದಾಗ ಇಬ್ಬರು ಮೂವರನ್ನು ತಂದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಇವತ್ತಿನ ದಿವಸ ಐ.ಎ.ಎಸ್. ಅಧಿಕಾರಿ ಬಂದು ಕುಳಿತರೆ ಆತನೊಬ್ಬನ ಹತ್ತಿರವೇ ಲಗಾಮು ಇರುತ್ತದೆಂಬ ಭಾವನೆ ಇದೆ. ನಿಮಗೆ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇದೆ. ಆದ್ದರಿಂದ ಐ.ಎ.ಎಸ್. ಅಧಿಕಾರಿ ಒಂದು ವೇಳೆ ತಪ್ಪು ಮಾಡಿದರೂ ಅವರಿಗೂ ಶಿಕ್ಷೆಮಾಡಬೇಕು. ಐ.ಎ.ಎಸ್. ಆಫೀಸರ ಜೊತೆಯಲ್ಲಿ ಮೈಸೂರು ಸಿವಿಲ್ ಸರ್ವಿಸ್‌ನವರು ಕೆಲವರು ಇದ್ದಾರೆ. ಅವರ ಪೈಕಿ 16—18 ಜನರನ್ನು ರೆಕ್ರೂಟ್ ಮಾಡಿದ್ದಾರೆ. ಈಗ ಅವರ ಪರಿಸ್ಥಿತಿ ಏನಾಗಿದೆಯೆಂದರೆ, ಐದು ವರ್ಷಗಳಾದರೂ ಇವತ್ತಿನವರೆಗೂ ಪ್ರೊಮೋಷನ್ ಕೊಟ್ಟಿಲ್ಲ. ಐ.ಎ.ಎಸ್. ನವರಿಗೇನೋ ಪ್ರೊಮೋಷನ್ ಬರುತ್ತಾ ಇದೆ. ಐ.ಎ.ಎಸ್. ಅಧಿಕಾರಿಗಳು ಇರಬೇಕು. ಅವರನ್ನು ಬೇಡ ಎಂದು ನಾನು ಹೇಳುವುದಿಲ್ಲ. ಈ ದಿವಸ ಅಧಿಕಾರಿಗಳ ಸಂಖ್ಯೆಯೇನೋ ಜಾಸ್ತಿಯಾಗುತ್ತಿದೆ. ಆಡಳಿತ ಕುಸಿದುಬೀಳುತ್ತಿದೆ. ಈಗಿನ ಆಡಳಿತದಲ್ಲಿ ಜನರಿಗೆ ಒಂದು ರೀತಿಯಲ್ಲಿ ನಂಬಿಕೆ ಇಲ್ಲ. ಇನ್ನು ಕೆಲವುಕಡೆ ಏನಾಗಿದೆಯೆಂದರೆ, ಮೊದಲು ಜಿಲ್ಲಾಧಿಕಾರಿಗಳು ಅಂದರೆ ಬಹಳ ಮನ್ನಣೆ, ಗೌರವ ಇತ್ತು. ಜಿಲ್ಲಾಧಿಕಾರಿಗಳು ಅಂದರೆ He is the representative of the Government in the district ಎಂಬ ಭಾವನೆ ಇತ್ತು. ಇವತ್ತು ಏನಾಗಿದೆ, ಇವರು ತಮ್ಮ ಸ್ವಾರ್ಥಸಾಧನೆ ಮಾಡಿಕೊಳ್ಳಲು ಇದ್ದಾರೆ. ಯಾರು ಜೀಹುಕುಂ ಎಂದು ಇದ್ದಾರೋ ಅಂಥ ಜಿಲ್ಲಾಧಿಕಾರಿಗಳನ್ನು ತಮ್ಮ ಕೈಗೆ ಹಾಕಿಕೊಂಡಿದ್ದಾರೆ. ಅಂತಹ ಒಬ್ಬ ಅಧಿಕಾರಿಯನ್ನು ನಮ್ಮ ಜಿಲ್ಲೆಯಲ್ಲಿಯೂ ಇಟ್ಟುಕೊಂಡಿದ್ದಾರೆ. ಅವರು ಜಿಲ್ಲಾಧಿಕಾರಿಯಾಗಿ ಕೆಲಸಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳಿಗೆ ಏನು ಹೇಳುತ್ತೇನೆಂದರೆ, ಅವರ ಮನೆಯಲ್ಲಿ ಕುಳಿತುಕೊಳ್ಳುವುದು, ಅವರ ಯೋಗಕ್ಷೇಮವನ್ನು ವಿಚಾರಿಸುವುದು, ಚಾ ಕುಡಿಯುವುದು—ಇದು ಸರಿಯಲ್ಲ. ಇದರಿಂದಾಗಿ ಅವರು ನಮ್ಮ ಜಿಲ್ಲೆಯಲ್ಲಿ ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ಆಹಾರ ಪರಿಸ್ಥಿತಿ ಕಷ್ಟವಾಗಿರುವಾಗ ಅವರು ಸರಿಯಾದ ರೀತಿಯಲ್ಲಿ ಅಲ್ಲಿ ಆಡಳಿತ ಮಾಡದೆ ಜಿಲ್ಲೆಗೆ ಬಹಳ ತೊಂದರೆಯಾಗಿದೆ. ಈಗ ಆಹಾರ ಮಂತ್ರಿಗಳು ಇಲ್ಲಿ ಇದ್ದಾರೆ. ನಾನು ಹೇಳಿದ ಮಾತಿಗೆ ಇವರನ್ನು ಕೇಳಿದರೆ ಅದಕ್ಕೆ ಪುಷ್ಟೀಕರಣ ಸಿಕ್ಕೀತು ಎಂದು ಅಂದುಕೊಂಡಿದ್ದೇನೆ. ಅಲ್ಲಿ ಅವರು ಆಹಾರದ ಮಟ್ಟವನ್ನು ಸಂಪೂರ್ಣವಾಗಿ ಹದಗೆಡಿಸಿದ್ದಾರೆ. ಮುಖ್ಯ ಮಂತ್ರಿಗಳು ಅವರನ್ನು ತಮ್ಮ ಮಾಸ್ತಿಪೀಸಾಗಿ ಇಟ್ಟುಕೊಂಡಿದ್ದಾರೆ. ಅದು ಅವರ ಜಿಲ್ಲೆಯಲ್ಲ. ಇದೂ ಅಲ್ಲದೆ ಆಡಳಿತದಲ್ಲಿ ಹಸ್ತಕ್ಷೇಪಮಾಡಿ ಅಧಿಕಾರಿಗಳನ್ನು ಈ ರೀತಿಯಾಗಿ ತೆಗೆದುಕೊಂಡು ಹೋಗಿರುವುದರಿಂದ ಅದರ ದುಷ್ಪರಿಣಾಮ ದೇಶದ ಮೇಲೆ ಉಂಟಾಗಿ ಇವತ್ತಿನ ದಿವಸ ಜನರಿಗೆ ತುಂಬಾ ತೊಂದರೆ ಬಂದು ದೇಶದಲ್ಲಿ ಎಲ್ಲಾ ಕೆಟ್ಟುಹೋಗಿ ಆಡಳಿತವೂ ಈಗ ಕೆಟ್ಟಿದೆ. ಬೇರೆ ಪ್ರಾಂತಗಳಿಂದ ಬಂದಿರತಕ್ಕ ಕೆಲವು ಸ್ನೇಹಿತರು ಜನರಲ್ ಅಡ್ಮಿನಿಸ್ಟ್ರೇಷನ್ ಟ್ಯೂನಪ್ ಆಗಬೇಕು, ಇದು ಸರಿ ಹೋಗದೆ ಹೋದರೆ ರಾಜ್ಯಾಡಳಿತ ಇನ್ನೂ ಕೆಟ್ಟುಹೋಗುತ್ತದೆಂದು ಹೇಳಿದ್ದಾರೆ. ಇನ್ನು ಗೌವರ್ನರ್ಸ್ ಎಸ್ಟಾಬ್ಲಿಷ್‌ಮೆಂಟನ್ನು ಬಹಳ ಹೆಚ್ಚುಮಾಡಿದ್ದಾರೆ. ಆಮೇಲೆ ಸೆಕ್ರೆಟೇರಿಯಟ್ ಸ್ಟಾಫನ್ನು ತೆಗೆದುಕೊಂಡರೆ ಸಿಬ್ಬಂದಿ ಖರ್ಚು 65—66 ನೆ ಸಾಲಿನಲ್ಲಿ 63 ಲಕ್ಷ 71 ಸಾವಿರ ಇದ್ದುದ್ದು 67—68 ನೇ ಸಾಲಿಗೆ 87 ಲಕ್ಷ ಎರಡು ಸಾವಿರ ರೂಪಾಯಿಗಳೆಂದು ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿಮಾಡುತ್ತಿದ್ದಾರೆ. ಆದರೆ ಆಡಳಿತದ ಫಲ ದೇಶದಲ್ಲಿ ಜನರಿಗೆ ಸಿಗಲಿಲ್ಲ. ವಾಸ್ತವವಾಗಿ ಆಡಳಿತ ಸೂತ್ರವನ್ನು ಸರಿಯಾಗಿ ಮಾಡಬೇಕಾದರೆ ನಾನು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಇತರ ಮಂತ್ರಿಗಳು ಅಧಿಕಾರಿಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡದೆ ಮಾಡಿದರೆ ಮತ್ತು ಅಧಿಕಾರಿಗಳಿಗೆ ಅವರವರ ಆಡಳಿತ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವಂತೆ ಮಾಡಿದರೆ ಅದು ಆಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಇವತ್ತಿನ ದಿವಸ ಈ ದೇಶದಲ್ಲಿ ಬಂದಿರುವ ವಿಪತ್ತು ಎಲ್ಲಾ ಕಡೆಯೂ ಇದೆ. ಅದರ ಬಗ್ಗೆ ಟೆಕ್‌ನೊ ಇಕನಾಮಿಕ್ ಸರ್ವೆ ಆಫ್ ಮೈಸೂರು ಎಂಬ ಒಂದು ಪುಸ್ತಕದಲ್ಲಿ ಬಹಳ ಚೆನ್ನಾಗಿ ಒಂದೇ ಮಾತಿನಲ್ಲಿ ಹೇಳಿದ್ದಾರೆ. ಇವರು ಇಷ್ಟೊಂದು ಪ್ಲಾನುಗಳನ್ನು ಮಾಡಿದರೂ, ಯೋಜನೆಗಳನ್ನು ಹಾಕಿಕೊಂಡರೂ ಏನೂ ಫಲ ಬರಲಿಲ್ಲ. ಅದಕ್ಕಾಗಿ ಅವರು ಎರಡು ವಾಕ್ಯಗಳಲ್ಲಿ ಹೇಳಿರುವುದನ್ನು ಇಲ್ಲಿ ಓದಿ ತಿಳಿಸುತ್ತೇನೆ. ಅದು ಈ ರೀತಿ ಇದೆ :

"Though an analysis of the administrative and organisational process is outside the purview of this report, the Council wants to emphasise that without a good administrative system, the whole development effort will come to a nought. The poor

achievement in the past is partly due to the lack of effective administrative system geared to the requirements of development. This particular aspect of planning will have to be given greater attention."

ಸರ್ಕಾರದವರು ಸರಿಯಾದ ರೀತಿಯಲ್ಲಿ ನಡೆಯಬೇಕು. ದೇಶಕ್ಕೆ ಬಹಳವಾಗಿ ಒಳ್ಳೆಯದಾಗಬೇಕೆಂಬ ಮನಸ್ಸು ಸರ್ಕಾರಕ್ಕೆ ಇದ್ದರೆ ಅಡ್ಮಿನಿಸ್ಟ್ರೇಷನ್ ಹೆಚ್ಚು ಸೆಟಪ್ಪನ್ನು ಟ್ಯೂನಪ್ ಮಾಡಬೇಕು. ನಿಷ್ಪಕ್ಷಪಾತ ದೃಷ್ಟಿಯಿಂದ ಆಡಳಿತ ಮಾಡತಕ್ಕ ಅಧಿಕಾರಿಯಾದರೆ ಅವನನ್ನು ಚೆಂಡು ಒದ್ದ ಹಾಗೆ ಇನ್ನೊಂದು ಜಾಗಕ್ಕೆ ಹಾಕುತ್ತೀರಿ. ಒಬ್ಬ ಅಧಿಕಾರಿಯನ್ನು ಕೇವಲ 5 ವರ್ಷಗಳಲ್ಲಿ 13 ಸಾರಿ ವರ್ಗಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರ ಆಡಳಿತ ಬಂದಮೇಲೆ ಅವರ ಮುಖ್ಯ ಮಂತ್ರಿತ್ವದಲ್ಲಿ ಒಳ್ಳೆಯ ನಿಪುಣರಾದಂಥ ಹಾಗೂ ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂಥ ಸಿಟ್ಟು ಬಂತು ಎಂಬ ಹಾಗೆ, ಇದ್ದಕ್ಕಿದ್ದ ಹಾಗೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ವರ್ಗಾವಣೆ ಮಾಡುವುದು ಸರಿಯಲ್ಲ. ಇವರಿಗೇನಾದರೂ inconvenient position ಆದ ಕೂಡಲೇ ಇನ್ನೊಬ್ಬ ಅಧಿಕಾರಿಗಳಾಗಿರುವವರು ಇವರಿಗೆ ಫೋನ್ ಮಾಡಿದರೆ ಸಾಕು. Request from so and so; telephone from so and so. Since this is against the rules, it cannot be done. ಎಂದು ಹೇಳಿಬಿಡುತ್ತಾರೆ. ಇದರಿಂದ inconvenient position ಬಂದಿದೆಯೆಂದು ಹೇಳಿದರೆ ಸಾಕು, ಅವನನ್ನು ತೆಗೆದುಹಾಕಿ, ಬೇರೆಯವರನ್ನು ವರ್ಗ ಮಾಡಿ ಎಂದು ಹೇಳುವುದು, ಸರಿಯಲ್ಲ. ಆದ್ದರಿಂದ ಆಡಳಿತ ಸರಿಯಾಗಿ ನಡೆಯಬೇಕಾದರೆ ಇವರ ಹಸ್ತಕ್ಷೇಪ ಇರಬಾರದು ಎಂಬುದಾಗಿ ಮತ್ತೆ ಒತ್ತಿ ಒತ್ತಿ ಹೇಳುತ್ತೇನೆ.

ಇನ್ನು ವ್ಯವಸಾಯ ವಿಷಯ. ಈ ದಿವಸ ಮೈಸೂರು ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಿರುವವರಿಗೆ ವ್ಯವಸಾಯದ ಪೋರ್ಟ್‌ಫೋಲಿಯೊ ಕೊಟ್ಟಿರುವುದು ಅಕ್ಷಮ್ಯ ಅಪರಾಧ. ಕಾರಣವಿಷ್ಟೆ: ಇವರಿಂದ ಅದನ್ನು ನಿರ್ವಹಿಸುವ ಶಕ್ತಿ ಇಲ್ಲ. ಅದರಲ್ಲಿ ಏನೂ ಅನುಮಾನವಿಲ್ಲ. ಅವರ ಪೈಕಿ ವ್ಯವಸಾಯಕ್ಕೆ ಕೈಹಾಕಿರುವವರು, ಹಾಗೂ ವ್ಯವಸಾಯ ಮಾಡಿದ ಮಹನೀಯರು ತರುಣರೂ ಕೆಲವರು ಇದ್ದಾರೆ. ಅವರಿಗೆ ಆ ಪೋರ್ಟ್‌ಫೋಲಿಯೊ ಕೊಟ್ಟರೆ ಖಂಡಿತವಾಗಿ ನಿರ್ವಹಿಸುತ್ತಾರೆ. ಆ ಶಕ್ತಿ ಅವರಿಗೆ ಇದೆ. ನನಗೆ ಜ್ಞಾಪಕವಿರುವ ಹಾಗೆ ಹಿಂದೆ ದಿವಂಗತ ಕೆ. ಟಿ. ಭಾಷ್ಯಂ ಅವರು ಏನು ಮಹಾ ದಿವಾನಗಿರಿ, ಯಾವುದಾದರೂ ಒಂದು ಪ್ರಾಣಿಗೆ ಒಂದು ರುಜು ಮಾಡುವುದನ್ನು ಕಲಿಸಿದರೆ ಪೇಟಾ ಕಟ್ಟಿ ಕೂಡಿಸಿದರೆ ಸಾಕು ಅದೇ ಮಾಡುತ್ತದೆಂದು ಹೇಳುತ್ತಿದ್ದರು. ಕಾಲ ಬದಲಾಯಿಸಿದೆ. ವ್ಯವಸಾಯಮಂತ್ರಿಗಳು ಆಗಬೇಕಾದರೆ ಅವರಿಗೆ ಒಳ್ಳೆಯ ಶಕ್ತಿ ಇರಬೇಕು. ಏಕೆಂದರೆ, ವ್ಯವಸಾಯದ ಕೆಲಸ ಸುಲಭವಲ್ಲ. ಯಾವ ಪೋರ್ಟ್‌ಫೋಲಿಯೋವನ್ನಾದರೂ ನಿರ್ವಹಿಸಬಹುದು. ಆದರೆ ವ್ಯವಸಾಯ ಖಾತೆಯನ್ನು ಹೊಂದಿರತಕ್ಕವರಿಗೆ ಉಕ್ಕಿನ ನರಗಳು ಬೇಕು. ಅದನ್ನು ಕಾರ್ಯ ಸಾಧನೆ ಮಾಡತಕ್ಕ ಶಕ್ತಿ ಬೇಕು. ಒಬ್ಬ ನಿವೃತ್ತಿ ಹೊಂದಿದ ಐ.ಸಿ.ಎಸ್. ಆಫೀಸರ್ ಅಂತಹವರನ್ನು ಈ ಖಾತೆಯಲ್ಲಿ ಉಪಯೋಗಿಸಬೇಕು. ಇವರ ಕನ್‌ಸಲ್‌ಟೇಟಿವ್ ಅಥವಾ ಅಡ್ವೈಸರಿ ಕೆಪಾಸಿಟಿಗಳನ್ನು ಉಪಯೋಗಿಸಿಕೊಂಡರೆ ವ್ಯವಸಾಯ ಅಭಿವೃದ್ಧಿಯಾಗುತ್ತದೆ. ಶ್ರೀ ಎಚ್. ವಿ. ಆರ್. ಐಯ್ಯಂಗಾರ್ ಅವರು credit to the farmers ಎಂಬ ಬಗ್ಗೆ ಒಂದು ಆರ್ಟಿಕಲ್ಲನ್ನು ಬರೆದಿದ್ದಾರೆ. ಅದು ಜುಲೈ 13ನೇ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಇದೆ. Some years ago a Committee appointed by the Government of India recommended that the Department of Agriculture in each State should be treated not as a secondary post to which any one could be appointed, but one of supreme importance to be allotted to only the best man in the Cabinet. Without disrespect to individual Ministers it can be said that this has not happened in India. ಇವತ್ತಿನದಿವಸ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ರಾಜ್ಯದ ಮೇಲೆ ಅಭಿಮಾನವಿದ್ದರೆ ಈ ದೇಶವನ್ನು ಇನ್ನೂ ಹೆಚ್ಚು ಬೆಳೆಸಬೇಕು ಎಂಬ ಆಶೆ ಆಕಾಂಕ್ಷೆ ಇದ್ದರೆ ಅವರ ಹತ್ತಿರ ಇರತಕ್ಕಂಥ ಖಾತೆಗಳನ್ನು ಬೇರೆಯವರಿಗೆ ಬಿಟ್ಟುಕೊಡದಿದ್ದರೆ ನಮ್ಮ ದೇಶಕ್ಕೆ ಏನೂ ಉಳಿಯುವುದಿಲ್ಲ. ನಮ್ಮ ದೇಶದ ಜನಗಳ ಕೈಯ್ಯಲ್ಲಿ ಚಿಕ್ಕನಾಯಕನ ಹಳ್ಳಿ ಚಿಪ್ಪು ಕೊಡಬೇಕಾಗುತ್ತದೆ. ಇವರ ಕೈಯ್ಯಲ್ಲಿ ಅಧಿಕಾರವಿದ್ದರೆ ನಮ್ಮ ದೇಶಕ್ಕೆ ಏನು ಉಳಿಯುವುದಿಲ್ಲ. ಇದು ಅತ್ಯಂತ ವ್ಯಸನದಿಂದ ಹೇಳಬೇಕಾಗಿದೆ. ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ವ್ಯವಸಾಯದಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡಬೇಕಾಗಿದ್ದರೆ ಮುಖ್ಯವಾಗಿ ರೈತರಿಗೆ ಬೇಕಾಗಿರುವುದು, ಒಳ್ಳೆಯ ಬೀಜ ಮತ್ತು ಗೊಬ್ಬರ. ಇವು ರೈತರಿಗೆ ಕಾಲಕ್ಕೆ ಸರಿಯಾಗಿ ಸಿಕ್ಕಬೇಕು. ನಮ್ಮ ನಾಡಗೌಡರ ಇಲಾಖೆ ಸಹ

(ಶ್ರೀ ಎಚ್. ಸಿದ್ಧವೀರಪ್ಪ)

ಕಾರ ಇಲಾಖೆ ಏನಿದೆ ಅದು ನಮಗೆ ಮಾರಿ ಇದ್ದಹಾಗೆ ಇದೆ. ಆ ಇಲಾಖೆಯನ್ನು ಅಲಿಬಾಬ ಮತ್ತು 40 ಮಂದಿ ಕಳ್ಳರು ಎಂದುಕೊಳ್ಳಬಹುದು. ಇವೊತ್ತು ಭದ್ರಾ ಚಾನಲ್ ಏರಿಯಾದಲ್ಲಿ ಮಂಡ್ಯ ಆದಹಾಗೆ ಆಗುತ್ತಿದೆ. ಆದರೆ ತೊಂದರೆ ಏನಾಗಿದೆ ಎಂದರೆ ಕಾಲಕ್ಕೆ ಸರಿಯಾಗಿ ಗೊಬ್ಬರ ಬೀಜ ವಗೈರೆಗಳು ಸಿಕ್ಕುವುದಿಲ್ಲ. ಗೊಬ್ಬರವನ್ನು ಸಹಕಾರ ಸಂಘಗಳು ಹಂಚಬೇಕು. ಈ ಸಹಕಾರ ಸಂಘಗಳಲ್ಲಿ ಬರೀ ರಾಜಕೀಯವನ್ನು ಬಿಟ್ಟರೆ ಇನ್ನೊಂದಿಲ್ಲ. ಇವನು ನಮ್ಮ ಕಡೆಯವನು ಕೊಡಿ, ಇವನು ನಮ್ಮ ಕಡೆಯವನಲ್ಲ ಇವನಿಗೆ ಕೊಡಬೇಡಿ. ಈ ರೀತಿ ನಡೆದರೆ ನಮ್ಮ ವ್ಯವಸಾಯ ಯಾವ ರೀತಿ ನಡೆಯಬೇಕು ? ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರು ಬಹಳ ಶಕ್ತಿವಂತರೆಂದು ನಾನು ಕೇಳಿದ್ದೇನೆ. ಸಂತೋಷ. ಸರಿಯಾದಂತಹ ಅಧಿಕಾರಿಗಳ ಕೈಯ್ಯಲ್ಲಿ ಅಧಿಕಾರವನ್ನು ಕೊಟ್ಟರೆ ಕೆಲಸ ಚೆನ್ನಾಗಿ ನಡೆಯುತ್ತದೆ. ನನ್ನ ದೃಷ್ಟಿಯಲ್ಲಿ ಅಧಿಕಾರಗಳಲ್ಲಿ ಒಳ್ಳೆಯವರು ಒಂದು ಜಾತಿ ಕೆಟ್ಟವರು ಒಂದು ಜಾತಿ ಇದ್ದಾರೆ. ಒಳ್ಳೆಯ ಅಧಿಕಾರಿಗಳಿಗೆ ಪ್ರೋತ್ಸಾಹವನ್ನು ಕೊಡಬೇಕು. ಇವೊತ್ತಿನ ದಿವಸ ಸಹಕಾರಸಂಘಗಳಲ್ಲಿರತಕ್ಕ ಗೊಬ್ಬರದ ಹಂಚಿಕೆಯನ್ನು ತಪ್ಪಿಸಿ ಈ ಇಲಾಖೆಯಲ್ಲಿ ಒಬ್ಬ ಸರಿಯಾದ ದಕ್ಷರಾದ ಅಧಿಕಾರಿಯನ್ನು ಇದಕ್ಕಾಗಿ ನೇಮಿಸಿಕೊಂಡು ಅವರ ಕೈಯ್ಯಲ್ಲಿ ಬರೀ ಗೊಬ್ಬರ ಮತ್ತು ಬೀಜದ ಹಂಚಿಕೆಯನ್ನು ಕೊಟ್ಟರೆ ಈ ಒಂದು ಅವ್ಯವಸ್ಥೆಯನ್ನು ತಪ್ಪಿಸಬಹುದು. ಇಲ್ಲದೇ ಇದ್ದರೆ ದೇಶ ಉಳಿಯುವುದಿಲ್ಲ. ಈ ಸಹಕಾರ ಸಂಘಗಳ ಮೂಲಕ ಸರಬರಾಜಾಗುವ ಅಮೋನಿಯಂ ಸಲ್ಫೇಟು ಇತ್ಯಾದಿ ಗೊಬ್ಬರದಲ್ಲಿ ಶೇಕಡ 50 ಭಾಗ ಕಳ್ಳಬಟ್ಟಿ ಸಾರಾಯಿ ಮಾಡುವುದಕ್ಕೆ ಹೋಗುತ್ತದೆ. ಆದ್ದರಿಂದಲೇ ನಾನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಹೇಳಿದೆ ಪಾರ್ಷಿಯಲ್ ಪ್ರೊಹಿಬಿಷನ್ ತರಬೇಡಿ ಎಂದು. ಶ್ರೀಮಾನ್ ನಾಗನಗೌಡರು ಒಳ್ಳೆಯ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ನೇಗಿಲನ್ನು ಹಿಡಿದುಕೊಂಡು ವ್ಯವಸಾಯವನ್ನು ಮಾಡತಕ್ಕ ನೇಗಿಲಯೋಗಿ. ಅಮೋನಿಯಂ ಸಲ್ಫೇಟನ್ನು ಡೈರೆಕ್ಟಾಗಿ ಭೂಮಿಗೆ ಕೊಡಬಹುದು ; ಆರೀತಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಅವರು ಹೇಳಿದ್ದಾರೆ. ಇವೊತ್ತಿನದಿವಸ ಅವರು ಹೇಳಿದರೀತಿ ಮಾಡುವುದಕ್ಕೆ ಅವಕಾಶವಿದೆ. ಆದರೆ ಇವೊತ್ತಿನ ದಿವಸ ಈ ಗೊಬ್ಬರದ ಹಂಚಿಕೆಯನ್ನು ಕಾಳಸಂತೆಕೋರರು, ದಗಾಕೋರರು ಮತ್ತು ಮೋಸಗಾರರ ಕೈಯಲ್ಲಿ ಕೊಟ್ಟು ಇದು ಸರಿಯಾಗಿ ರೈತರಿಗೆ ಹಂಚಿಕೆಯಾಗುತ್ತಿಲ್ಲ. ಆ ಗೊಬ್ಬರವೆಲ್ಲವೂ ಆಂಧ್ರ, ಮದ್ರಾಸು, ಕೇರಳ ಅಸ್ಸಾಂ ಇತ್ಯಾದಿ ಪ್ರಾಂತ್ಯಗಳಿಗೆ ಹೋಗುತ್ತಿದೆ. ಇವರಿಗೆ ಏನಾದರೂ ಮಾನ ಮರ್ಯಾದೆ ಇದೆಯೇ ? ಹುಲಿಕೋಟೆಯಲ್ಲಿ ಒಂದು ಕ್ಯಾಟಲ್ ಫೀಡ್ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದಾರೆ. ಹಾಗೆಯೇ ಮಂಡ್ಯದಲ್ಲಿಯೂ ಒಂದು ಕ್ಯಾಟಲ್ ಫೀಡ್ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದಾರೆ. ಮಂಡ್ಯದಲ್ಲಿರತಕ್ಕ ಸೊಸೈಟಿಯು ಚೆನ್ನಾಗಿ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಮಂಡ್ಯ ಸೊಸೈಟಿಗೆ 4 ಲಕ್ಷ ರೂಪಾಯಿಗಳ ಬಂಡವಾಳವನ್ನು ಸರ್ಕಾರದವರು ಕೊಡಬೇಕೆಂದು ಮಾಡಿದ್ದಾರಂತೆ ಆ ಸೊಸೈಟಿಗೆ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ನಾನು ಹೇಳದೆ ಏನೂ ಮಾಡಬೇಡಿ ಎಂದು ಹೇಳಿದ್ದಾರೆ. ಹುಲಿಕೋಟೆ ಸೊಸೈಟಿಯವರು 4 ಲಕ್ಷ ರೂಪಾಯಿಗಳ ಷೇರು ಬಂಡವಾಳವನ್ನು ಶೇಖರಿಸಿದ್ದಾರೆ. ಯಾರೋ ತಮಗೆ ಬೇಕಾದವರಿಗೆ ಅನುಕೂಲ ಮಾಡಬೇಕೆಂದು ಮುಖ್ಯಮಂತ್ರಿಗಳು ಆ ರೀತಿ ಹೇಳಿದ್ದಾರೆ. ಇದು ಸರಿಯೇ ? ಈ ರೀತಿ ಬೇಕಾದವರಿಗೆ ಒಂದು ಕಾನೂನು ಬೇಡವಾದವರಿಗೆ ಒಂದು ಕಾನೂನು ಮಾರ್ಗವನ್ನು ಅನುಸರಿಸುವುದು ಪಕ್ಷಪಾತ ಭಾವನೆ ಆಗುವುದಿಲ್ಲವೇ ? ಇದನ್ನು ತಪ್ಪಿಸಬೇಕು ; ಇಂಡಿಯಾ ದೇಶದಲ್ಲಿ 100 ಕ್ಕೆ 42 ಭಾಗ ನ್ಯಾಷನಲ್ ಇನ್‌ಕಂ ವ್ಯವಸಾಯದಿಂದ ಬರುತ್ತದೆ. ಮೈಸೂರಿನಲ್ಲಿ 50 ಪರ್ಸೆಂಟ್ ಬರುತ್ತದೆ. 100 ಕ್ಕೆ 72·4 ವ್ಯವಸಾಯದಿಂದ ಜೀವನ ಮಾಡುತ್ತಾರೆ. ಅದನ್ನು ಬಿಟ್ಟರೆ ನಮಗೆ ಬೇರೆ ಗತಿಯಿಲ್ಲ. 100 ಕ್ಕೆ 72 ಭಾಗ ಜನರು ಅವಲಂಬಿಸಿರತಕ್ಕ ಕಸುಬಿನ ಜನರ ಜೀವನವನ್ನು ಸಾಗಿಸುವುದು ಈ ವ್ಯವಸಾಯ ಇಲಾಖೆ. ಈ ಇಲಾಖೆ ಬಹಳ ಚುರುಕಾಗಿ ಕೆಲಸಮಾಡಬೇಕು. ಯಾರಾದರೂ ಒಬ್ಬರು ಚೆನ್ನಾಗಿ ಬೆಳೆದರೆ ಇವರು ಹೋಗಿ ಫೀಲ್ಡ್ ಡೇ ಮಾಡುತ್ತಾರೆ. ಯಾರೋ ಕಷ್ಟಪಟ್ಟು ಬೆಳೆದು ಇವರಿಗೆ ಊಟಕ್ಕೆ ಅರೇಂಜ್ ಮಾಡುತ್ತಾರೆ. 7 ಎಕರೆ ಜಮೀನಿನಲ್ಲಿ ಕಷ್ಟಪಟ್ಟು ಕೆಸರು ಗದ್ದೆ ಮಾಡಿ ತಾಯ್‌ಚುಂಗ್ ಬೀಜವನ್ನು ಹಾಕಿ 7 ಎಕರೆಯಲ್ಲಿ 10 ಕ್ವಿಂಟಾಲ್ ಬತ್ತವನ್ನು ಬೆಳೆದಿದೆ. ಇದು ನಾಚಿಕೆಗೇಡಿನ ಪ್ರಸಂಗ. ವ್ಯವಸಾಯದ ಅಭಿವೃದ್ಧಿಗೆ ಸಂಬಂಧಪಟ್ಟಹಾಗೆ ಒಂದು ಕ್ರಾಪ್ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಭತ್ತಕ್ಕೇ ಒಂದು ಯೋಜನೆಯನ್ನು ಮಾಡಿಕೊಂಡಿದ್ದಾರೆ. ಪೆಪ್ಪರ್, ಕಾರ್ಡಮಮ್ ಇವುಗಳಿಗೆ ಬೇರೆ ಯೋಜನೆಯನ್ನು ಹಾಕಿಕೊಂಡು ಬೆಳೆಯತಕ್ಕಂಥಾದ್ದನ್ನು ನಾವು ನೋಡಿದ್ದೇವೆ.

ಇನ್ನು ಟ್ರ್ಯಾಕ್ಟರುಗಳ ಸರ್ವೀಸಿಗೆ 10 ಲಕ್ಷ 80 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಟ್ರ್ಯಾಕ್ಟರ್ ಸರ್ವೀಸನ್ನು ಇಟ್ಟುಕೊಳ್ಳಬೇಡಿ ಅದರಿಂದ ತೊಂದರೆಯಾಗುತ್ತದೆ ನಾನು ವ್ಯವಸಾಯ ಮಂತ್ರಿಯಾಗಿದ್ದಾಗ್ಯೆ ಟ್ರ್ಯಾಕ್ಟರು ಇಂಜಿನಿಯರು ಸರ್ಕಾರದವರೇ ಇದ್ದರು. ಅವರು ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎಂದು ಹೇಳಿದರು. ಟ್ರ್ಯಾಕ್ಟರು ಕೆಲಸ ಮಾಡಿದ್ದನ್ನು ಲೆಕ್ಕ ತೆಗೆದು ಲೆಕ್ಕವನ್ನು ಹಾಕಿದರೆ ಒಂದು ಟ್ರ್ಯಾಕ್ಟರಿಗೆ ಒಂದು ಘಂಟೆ ಕೆಲಸ ಮಾಡಿದ್ದಕ್ಕೆ 3,200 ರೂಪಾಯಿಗಳು ಖರ್ಚು ಬಂತು. ಅಂದು ನಾನು ಆರ್ಡರ್ ಮಾಡಿದ್ದೇನೆ. ಅದನ್ನು ತೆಗೆದು ಭದ್ರಾವತಿಯ ಕಾರ್ಖಾನೆಗೆ ಕಳುಹಿಸಿ ಅದನ್ನು ಕರಗಿಸಿ ಬಿಡಲಿ ಎಂದು ಹೇಳಿದೆ. ಸುಮ್ಮನೆ ಕಣ್ಣುಮುಚ್ಚಿಕೊಂಡು ಹೋಗತಕ್ಕದ್ದಲ್ಲ. ಸ್ವಂತ ಶಕ್ತಿಯಿಂದ ಕೊಂಡುಕೊಳ್ಳುವವರಿಗೆ ಗ್ರಾಂಟು ಕೊಡಿ. ಸಹಾಯ ಮಾಡಿ. ಅದನ್ನು ಡಿಪಾರ್ಟ್‌ಮೆಂಟಿನವರು ಇಟ್ಟುಕೊಂಡು ಮೇಂಟೇನ್ ಮಾಡುವುದು ಸರಿಯಲ್ಲ.

ಕೋಲ್ಡ್‌ಸ್ಟೋರೇಜ್ ಪ್ಲಾಂಟನ್ನು ಕೆಲವು ಕಡೆ ಹಾಕಬಹುದು. ಮೂಡಬಿದರೆಯಲ್ಲಿ ಒಂದು ಕೋಲ್ಡ್‌ಸ್ಟೋರೇಜ್ ಪ್ಲಾಂಟ್ ಹಾಕಿದರೆ ಅದರಿಂದ ನಾನಾ ರೀತಿಯ ಅನುಕೂಲಗಳಾಗುತ್ತವೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಕೋಲ್ಡ್‌ಸ್ಟೋರೇಜ್ ಪ್ಲಾಂಟು ಇಟ್ಟುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಹೇಳುತ್ತೇನೆ.

ಇನ್ನು ಕೈಗಾರಿಕೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಇಂದು ನಮ್ಮ ದೇಶದಲ್ಲಿ ಈ ಕೈಗಾರಿಕೆ ಏನಾಗಿದೆ ? ಈ ಕೈಗಾರಿಕೆಯು ಕುಂಠಿತವಾಗಿದೆ ಪ್ರಪಂಚದಲ್ಲಿ. ಇಂಡಿಯಾ ದೇಶಕ್ಕೆ ಸೆರಿಕಲ್ಚರ್ ಅಂದರೆ ರೇಷ್ಮೆ ಕೈಗಾರಿಕೆಗೆ ನಾಲ್ಕನೇ ಸ್ಥಾನ ಇದೆ ಇಂಡಿಯಾದಲ್ಲಿ. ನಮ್ಮ ಮೈಸೂರು ರಾಜ್ಯದಲ್ಲಿಯೇ 100 ಕ್ಕೆ 78 ಪರ್ಸೆಂಟ್ ರೇಷ್ಮೆ ಕೈಗಾರಿಕೆ ಇದೆ. ಇತ್ತೀಚೆಗೆ ಸರ್ಕಾರದವರು ಬೆಳಗಾಂನಲ್ಲಿ ಪ್ರಾಯೋಗಿಕವಾಗಿ ಒಂದು ಸೆಂಟರ್ ಪ್ರಾರಂಭ ಮಾಡಿದ್ದಾರೆ. ಬಹಳ ಸಂತೋಷದ ವಿಚಾರ. ಇವರು ಈ ಕೈಗಾರಿಕೆಯ ಬಗ್ಗೆ ಏನು ಮಾಡಿದ್ದಾರೆ ? ಹಿಂದಕ್ಕೆ ನವರತ್ನ ರಾಮರಾಯರು ನಮ್ಮ ಮೈಸೂರು ರಾಜ್ಯದಲ್ಲಿ ಇದ್ದರು. ಅವರ ಕಾಲದಲ್ಲಿ ಬೇಕಾದಷ್ಟು ಸುಧಾರಣೆ ಮಾಡಲಾಯಿತು. ಈ ರೇಷ್ಮೆ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕಂಥ ಕೆಲವರು ಜಪಾನ ದೇಶಕ್ಕೆ ಹೋಗಿಬಿಟ್ಟು ಅಲ್ಲಿಂದ ಫಾರೆನ್ ಗ್ರಾಫ್ಟ್ ತಂದು ಇಲ್ಲಿ ಅದನ್ನು ಪ್ರೊಪಗೇಟ್ ಮಾಡಿದವರು ಇದ್ದಾರೆ. ಆದರೆ ಈಗ ರೇಷ್ಮೆ ಕೈಗಾರಿಕೆ ಬಹಳ ಕೆಟ್ಟುಹೋಗಿದೆ. ರೇಷ್ಮೆ ಕೈಗಾರಿಕೆ ಕೆಟ್ಟುಹೋಗಿರುವಷ್ಟು ಬೇರೆ ಯಾವ ಕೈಗಾರಿಕೆಯೂ ಇಲ್ಲ. ಇದನ್ನು ಬಹಳ ಕಳಕಳಿಯಿಂದ ಹೇಳುತ್ತೇನೆ. ಮೈಸೂರಿನ 5 ಜಿಲ್ಲೆಗಳಲ್ಲಿ ಸುಮಾರು 25 ಲಕ್ಷ ಜನರು ರೇಷ್ಮೆ ಕೈಗಾರಿಕೆಯಲ್ಲಿ ಜೀವನ ಮಾಡುತ್ತಾರೆ. ಸೆಂಟ್ರಲ್ ಸಿಲ್ಕ್ ಬೋರ್ಡಿಗೆ ನಾನು ಮೆಂಬರ್ ಆಗಿ ಹೋಗುತ್ತಿದ್ದೆನು. ಅದರಲ್ಲಿ ಬೇರೆ ವ್ಯಾಪಾರಸ್ಥರು ದೊಡ್ಡ ದೊಡ್ಡ ಜನರು ಇದ್ದರು. ಮೈಸೂರು ಸರ್ಕಾರದವರು ಪ್ರಯತ್ನ ಮಾಡಿ ಸೆಂಟ್ರಲ್ ಸಿಲ್ಕ್ ಬೋರ್ಡು ಮೈಸೂರು ರಾಜ್ಯದಲ್ಲಿ ಇರಬೇಕು ಯಾಕೆಂದರೆ ಈ ಕೈಗಾರಿಕೆ 100 ಕ್ಕೆ 78 ಪರ್ಸೆಂಟ್ ಇಲ್ಲಿ ಇದೆ ಎಂದು ಪ್ರಯತ್ನ ಮಾಡಿ ಇಲ್ಲಿಗೆ ತರಲಾಯಿತು. ಆಗ್ಗೆ ಟೆಕ್ಸ್‌ಟೈಲ್ ಕಮಿಷನರ್ ಅವರು ಮೈಸೂರಿನವರು ಇದ್ದರು ಇದಲ್ಲದೆ ಕೇಂದ್ರದಲ್ಲಿ ಒಬ್ಬರು ಮಂತ್ರಿಗಳು ಮೈಸೂರಿನವರು ಇದ್ದರು. ಪ್ರಯತ್ನ ಮಾಡಿ ಇಲ್ಲಿಗೆ ನಾವು ಅದನ್ನು ತಂದಿದ್ದೇವೆ. 18 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ರಿಸರ್ಚ್ ಸ್ಟೇಷನ್ ಚೆನ್ನಪಟ್ಟಣದ ಹತ್ತಿರ ಪ್ರಾರಂಭ ಮಾಡಲಾಗಿತ್ತು. ಇಷ್ಟು ಪ್ರಯತ್ನ ಮಾಡಿ ಪ್ರಗತಿ ಸಾಧನೆ ಈ ಕೈಗಾರಿಕೆಯಲ್ಲಿ ಮಾಡಿದ್ದೇವೆ. ಆದರೆ ಈಗ ಇವರು ಮಾಡುವುದನ್ನು ನೋಡಿ ನಗಬೇಕೋ ಅಳಬೇಕೋ ಎಂಬುದು ಅರ್ಥವಾಗುವುದಿಲ್ಲ. ಶ್ರೀ ಆರ್. ಎಂ. ಪಾಟೀಲರು ಬಂದು ಈ ರಿಸರ್ಚ್ ಸ್ಟೇಷನ್ನನ್ನು ಅಲ್ಲಿಂದ ಎತ್ತಿಬಿಟ್ಟರು. ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ದುಡ್ಡು ತಂದು ಹಾಕಿ ಕಟ್ಟಿಸಿದಂಥ ಈ ರಿಸರ್ಚ್ ಸ್ಟೇಷನ್ನು ಹೋಯಿತು. ನಮ್ಮ ದೇಶದಲ್ಲಿ ಸೆರಿಕಲ್ಚರ್ ಡೆವಲಪ್ ಆಗಬೇಕಾದರೆ ಪ್ರತಿ ದಿವಸ ರಿಸರ್ಚ್ ಕೆಲಸ ನಡೆಯಬೇಕು ಟೆಕ್ನಾಲಜಿ ಫಾಲೋ ಮಾಡಬೇಕಾಗುತ್ತದೆ. ಇಂತಹಕ್ಕಂಥ ಫೀಚರ್ ಮುಚ್ಚುತ್ತಾರೆ, ಮೈಸೂರಿನಲ್ಲಿ ಇದು ಮುಚ್ಚುವ ಸ್ಥಿತಿಗೆ ಬಂದಿದೆ. ಹೆಚ್ಚಾಗಿ ಇದನ್ನು ಬೆಳೆಸುವುದಕ್ಕೆ ಇವರು ಬಂದಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಮ್ಮ ಸೆರಿಕಲ್ಚರ್ ಇಂಡಸ್ಟ್ರೀ ಇವರು ಹಾಳುಮಾಡಿದ್ದಾರೆ. ಇದರಲ್ಲಿ ತೊಂದರೆ ಏನೇನು ಆಗಿದೆ ಅದನ್ನು ತೆಗೆದು ಹಾಕಿ ಈ ಕೈಗಾರಿಕೆ ಅಭಿವೃದ್ಧಿಪಡಿಸಬೇಕಾದುದು ಅಗತ್ಯ ಎಂದು ಹೇಳುತ್ತೇನೆ.

ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ತೆಗೆದುಕೊಳ್ಳೋಣ. ಈಗ ಕಾಲ ಸನ್ನಿಹಿತವಾಗಿದೆ. ಕೈಗಾರಿಕೆಗಳಲ್ಲಿ ಹಾಕಿರತಕ್ಕಂಥ ಕೋಟ್ಯಾಂತರ ರೂಪಾಯಿ ಬಂಡವಾಳಕ್ಕೆ ಹೇಳುವವರಿಲ್ಲ ಕೇಳುವವರು ಇಲ್ಲ ಆಗಿದೆ. ಕೆಲವು ಇಂಡಸ್ಟ್ರೀಜ ಬಗ್ಗೆ ಕಾರ್ಪೊರೇಷನ್ ಮಾಡಿದ್ದಾರೆ. ಆದರೆ

(ಶ್ರೀ ಎಚ್. ಸಿದ್ದವೀರಪ್ಪ)

ಭದ್ರಾವತಿ, ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಇವುಗಳಲ್ಲಿ ಏನೇನು ನಡೆದಿದೆ ಎಂಬುದು ಗೊತ್ತಾಗದ ಹಾಗೆ ಯಾವುದೂ ತಿಳಿಯದ ರೀತಿಯಲ್ಲಿ ನಮ್ಮನ್ನು ಕತ್ತಲಲ್ಲಿ ಇಟ್ಟಿದ್ದಾರೆ. ಹಿಂದಕ್ಕೆ ಗವರ್ನ್‌ಮೆಂಟ್ ಪಬ್ಲಿಕ್ ಇಂಡಸ್ಟ್ರಿಯಲ್ ಅಂಡರ್ ಟೇಕಿಂಗ್ಸ್‌ಗಳಿಗೆ ಮಂತ್ರಿಗಳು ಅಧ್ಯಕ್ಷರಾಗಿ ಇದ್ದು ಅವುಗಳನ್ನು ರಿವ್ಯೂ ಮಾಡುತ್ತಿದ್ದರು. ಈ ತಿಂಗಳು ಎಷ್ಟು ಪ್ರೊಡಕ್ಷನ್ ಆಯಿತು, ಎಷ್ಟು ಡೆವಲಪ್ ಆಯಿತು, ಎಷ್ಟು ಸೇಲ್ಸ್ ಆಯಿತು ಎಂಬುದನ್ನು ಅವರು ನೋಡುತ್ತಿದ್ದರು. ಆ ಪದ್ಧತಿ ಈಗಿನ ಮಂತ್ರಿಗಳು ಇಟ್ಟುಕೊಂಡಿದ್ದಾರೆಯೇ? ಇವರು ಮಾಡುತ್ತಿರುವುದು ಹೇಗೆ ಇದೆ ಅಂದರೆ ಇವರು ಆಡಿದ್ದೇ ಆಟ ಹೂಡಿದ್ದೇ ಲಗ್ಗೆ ಎಂದು ಹೇಳುವ ಹಳ್ಳಿಯ ಗಾದೆ ಮಾತಿನಂತೆ ಇದೆ. ಈ ರೀತಿ ಮಾಡಿದರೆ ಕೈಗಾರಿಕೆಯ ಬೆಳವಣಿಗೆಯಾಗುವುದಿಲ್ಲ. ಹಿಂದಕ್ಕೆ ನಮ್ಮಲ್ಲಿ ಪವರ್ ಇಲ್ಲದ ಕಾಲದಲ್ಲಿ ಇದ್ದಾಗ್ಗೆ ಕೂಡ ಹೊರಗಡೆ ದೇಶಗಳಿಂದ ನಮಗೆ ಇಂಟರ್ ನ್ಯಾಷನಲ್ ಕೊಟೇಷನ್ಸ್ ಬರುತ್ತಿದ್ದವು. ಹೊರಗಿನವರು ಕೈಗಾರಿಕೆ ಸ್ಥಾಪಿಸಲಿಕ್ಕೆ ಮುಂದೆ ಬರುತ್ತಿದ್ದರು. ಆ ರೀತಿ ಕೈಗಾರಿಕೆ ಚೆನ್ನಾಗಿತ್ತು. ಮುಖ್ಯಮಂತ್ರಿಗಳು ಅವರ ಸ್ನೇಹಿತರು ಸೇರಿಕೊಂಡು three muskteers ಆಗಿದ್ದಾರೆ. ಇವರು ಎಲ್ಲಾ ಕಡೆ ಹೋಗುತ್ತಾರೆ, ಕಲ್ಕತ್ತಾ, ದಿಲ್ಲಿ, ಬೊಂಬಾಯಿ ಹೀಗೆ ಎಲ್ಲಾ ಕಡೆ ಹೋಗುತ್ತಾರೆ. ಜನರನ್ನು ಕೇಳುತ್ತಾರೆ. ಮುಖ್ಯಮಂತ್ರಿಗಳು ಕರೆದರೆ ಅವರು ಬರಬೇಕು ಅಲ್ಲವೇ? ಇವರನ್ನು ಇವರ ವೈರಿಗಳು ನೋಡಿದವರೂ ಕೂಡ ಸಮಾಧಾನವಾಗುವ ಹಾಗೆ ಇದ್ದಾರೆ. ಇವರಿಗೆ ನಾನು ಒಂದು ಮಾತು ಹೇಳುತ್ತೇನೆ. ನಾನು ಹೇಳುವುದು ಅದರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗಿದೆ. ನಾನು ಹೇಳುವುದರ ಅರ್ಥ ಅವರು ಕಂಡುಕೊಳ್ಳುತ್ತಾರೆ ಎಂಬ ನಂಬಿಕೆ ನನಗೆ ಇದೆ. ನಾನು ಹೇಳುವುದು ಇಷ್ಟೇ. ಇವತ್ತಿನ ದಿವಸ ದೇಶದಲ್ಲಿ ಕೈಗಾರಿಕೆ ಕುಂಠಿತವಾಗಿದೆ. ನಮ್ಮಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಲ್ಲ. ಬಂಡವಾಳ ಇರುವ ಸಂಸ್ಥೆಗಳಿಗೆ 60 ಲಕ್ಷ 70 ಲಕ್ಷ ಕಮಿಷನ್ ಕೊಡುವ ರೀತಿಯಲ್ಲಿ ಮಾಡಲಾಗುತ್ತಿದೆ. ಹಂಚಿಕೆ ಮಾಡಿಕೊಳ್ಳುವುದಕ್ಕೆ ಯಾವ ಯಾವ ಸ್ಕೀಮ್ಸ್ ಹಾಕಬೇಕು ಎಂದು ನಡೆದಿದೆಯೇ ಹೊರತು ಉತ್ಪತ್ತಿ ಇರತಕ್ಕ ಸ್ಕೀಮ್ಸ್ ಬಹಳ ಕಡಿಮೆಯಾಗಿವೆ. ಹಿಂದಕ್ಕೆ ನಾವು ಆಡಳಿತ ಚೆನ್ನಾಗಿ ಮಾಡುತ್ತಾ ಇದ್ದೆವು. ಈಗ ದೊಡ್ಡ ಪ್ರಮಾಣದ ಕೈಗಾರಿಕೆ ನಿಮಗೆ ಮಾಡುವುದು ಆಗುವುದಿಲ್ಲ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಂದು ಹೇಳುತ್ತಾ ಏನೇನೂ ಮಾಡುತ್ತಾ ಇದ್ದೀರಿ. ಈ ಸ್ಮಾಲ್ ಇಂಡಸ್ಟ್ರೀಸ್ ಇದು ಗಗನ ಕುಸುಮವಾದ ಹಾಗೆ ಆಗಿದೆ. ಯಾವುದೂ ಕಣ್ಣಿಗೆ ಕಾಣುವುದಿಲ್ಲ. ಇದಕ್ಕೆ ಸರಿಯಾದ ಆಡಳಿತವಿಲ್ಲ. ಈಗ ಕಾಲ ಸನ್ನಿಹಿತವಾಗಿದೆ. ನಾನು ಏನೋ ಹೇಳುತ್ತೇನೆಂದು ತಿಳಿದುಕೊಳ್ಳಬೇಡಿ. ಗುಣಕ್ಕೆ ಮತ್ಸರವಿಲ್ಲದೇ ಹೇಳುತ್ತೇನೆ. ನಾನು ಹೇಳುವುದರಲ್ಲಿ ಯಾವ ಯಾವ ಅರ್ಥ ಇದೆ ಎಂಬುದಕ್ಕೆ ಗಮನಕೊಟ್ಟು ಹೇಗೆ ಕೈಗಾರಿಕೆಗಳು ಬೆಳೆಯಬೇಕು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ನೋಡುವುದಕ್ಕೆ ಒಂದು ಕಮಿಟಿ ನೇಮಕ ಮಾಡಿ. ಈ ಮಾನ್ಯ ಸಭೆಯ ಸದಸ್ಯರನ್ನೊಳಗೊಂಡ ಒಂದು ಸಮಿತಿ ಕೂಡಲೇ ನೇಮಿಸಬೇಕು. ಇಂಥ ಒಂದು ಸಮಿತಿಯನ್ನು ನೇಮಿಸಲೇಬೇಕು ಎಂದು ಹೇಳುತ್ತೇನೆ. ನೀವು ಹೋಗತಕ್ಕಂಥ ರೀತಿ ಸರಿಯಾಗಿ ಇದೆ ಎಂದು ಕಂಡುಬಂದರೆ ನಾವೂ ಸಹಾಯ ಮಾಡುತ್ತೇವೆ. ಇವರ ಕೈಯ್ಯಲ್ಲಿ ದೇಶದ ಆಡಳಿತವನ್ನು ಸುಗಮವಾಗಿ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದು ನಮಗೆ ಅನಿಸುತ್ತದೆ. ಒಂದು ತಿಂಗಳಿಂದ ಮಳೆಗರೆದಂತೆ ನಾವು ಹೇಳುತ್ತಿದ್ದೇವೆ. ಆದರೆ ನಾವು ಹೇಳುತ್ತೇವೆ ಅವರು ಹೋಗುವ ದಾರಿಯಲ್ಲಿ ಹೋಗುತ್ತಾರೆ. ಇದು ಸರಿಯಲ್ಲ. ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ದೇಶ ಹಾಳಾಗದಂತೆ ನೋಡಬೇಕು. ಒಳ್ಳೇ ಮಂತ್ರಿಗಳು ಇದ್ದಾರೆ, ಕೆಟ್ಟವರು ಇದ್ದಾರೆ. ಬಹಳ ಚೆನ್ನಾಗಿ ಕೆಲಸ ಮಾಡತಕ್ಕಂಥವರೂ ಇದ್ದಾರೆ. ಗುಣಕ್ಕೆ ಮತ್ಸರವಿಲ್ಲ. ನಾನು ಹೇಳುವ ಕೆಲವು ವಿಷಯಗಳನ್ನು ನೀವು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯ ತರುತ್ತೇನೆ. ಅವರು ಮನೆಗೆ ಯಜಮಾನರಾಗಿ ಇರಲಿ. ಅವರು ಕಷ್ಟ ಕೊಡತಕ್ಕಂಥ ಪೋರ್ಟ್‌ಫೋಲಿಯೋ ಇಟ್ಟುಕೊಳ್ಳುವುದು ಬೇಡ. ಮುಖ್ಯ ಮಂತ್ರಿಗಳ ವಿಚಾರದಲ್ಲಿ ಒಂದು ಸಣ್ಣ ಕಥೆ ಹೇಳುತ್ತೇನೆ. ಹಿಂದಕ್ಕೆ ಒಂದು ರಾಜ್ಯದಲ್ಲಿ ಪ್ರಜಾಪ್ರಭುತ್ವ ಇತ್ತು. ಆ ಪ್ರಜಾಪ್ರಭುತ್ವದ ಪದ್ಧತಿ ಏನು ಇತ್ತು ಅಂದರೆ, ಪ್ರಜೆಗಳಲ್ಲಿ ಒಬ್ಬರನ್ನು ಆರಿಸಿಕೊಟ್ಟು ಅವನನ್ನು ಎಲೆಕ್ಟೆಡ್ ಮೋನರ್ಕ್ (Elected monarch) ಎಂದು ಮಾಡುತ್ತಿದ್ದರು. ಒಂದು ಸಲ ಆ ಊರಿನ ರಾಜ ಸತ್ತುಹೋದನು. ಮತ್ತೊಬ್ಬ ರಾಜನನ್ನು ಮಾಡುವ ಪದ್ಧತಿ ಏನು ಇತ್ತು ಅಂದರೆ, ಊರಿನಲ್ಲಿಯ ಎಲ್ಲ ಜನರನ್ನೂ ಹೊರಗೆ ಹಾಕಿ ಕೋಟೆಯ ದಿಡ್ಡಿ ಬಾಗಿಲು ಹಾಕಿಬಿಡುವುದು. ನಿಯಮಿತ ಮುಹೂರ್ತದಲ್ಲಿ ದಿಡ್ಡಿ ಬಾಗಿಲನ್ನು ತೆಗೆದಾಗ ಈ ಬಾಗಿಲಿನಿಂದ ಮೊದಲು ಯಾರು ಒಳಗೆ ಬರುತ್ತಾರೋ ಅವನು ಅವರ ರಾಜ ಆಗಬೇಕು. ಅಂದು ಆ ಊರಿನ ಎಲ್ಲ ಜನರನ್ನೂ ಹೊರಗೆ,

ಹಾಕಿಬಿಟ್ಟರು. ಅದರಲ್ಲಿ ಒಬ್ಬ ಸನ್ಯಾಸಿಯೂ ಇದ್ದ. ಆ ಸನ್ಯಾಸಿಯು ತನ್ನ ಕೌಪೀನವನ್ನು ಗುಡಿಸಿಲಿನಲ್ಲಿ ಬಿಟ್ಟು ಬಂದಿದ್ದನು. ಅವನಿಗೆ ತನ್ನ ಕೌಪೀನದ ಧ್ಯಾನವೇ ಧ್ಯಾನ. ಎಲ್ಲಿ ಇಲಿ ಬೆಕ್ಕು ಅದನ್ನು ಹಾಳುಮಾಡುತ್ತವೆಯೋ ಎಂಬ ಯೋಚನೆ ಅವನಿಗೆ. ಮರುದಿನ ಮುಂಜಾನೆ ಬಾಗಿಲು ತೆರೆದ ಕೂಡಲೇ ಕೌಪೀನ ಧ್ಯಾನ ಮಾಡುವ ಆ ಸನ್ಯಾಸಿಯು ಎಲ್ಲರಿಗಿಂತ ಮುಂದೆ ಓಡಿ ಬಂದನು. ಕೂಡಲೇ ಅವನನ್ನು ಹಿಡಿದು ರಾಜನನ್ನಾಗಿ ಮಾಡಿದರು. ಅವನಿಗೆ ಷೋಡಶೋಪಚಾರ ಪೂಜೆ ಮಾಡಿದರು. ಈ ರಾಜನಿಗೆ ಯಾವಾಗಲೂ ತನ್ನ ಕೌಪೀನದ ಮೇಲೆ ದೃಷ್ಟಿ. ಪ್ರಧಾನಿಯನ್ನು ಕರೆಸಿ ತನ್ನ ಕೌಪೀನವನ್ನು ಬೊಕ್ಕಸದಲ್ಲಿ ಭದ್ರವಾಗಿ ಇಡಿಸಿದನು. ರಾಜ್ಯ ಆಡಳಿತದ ಕಡೆಗೆ ಅವನು ಗಮನ ಕೊಡಲಿಲ್ಲ. ಕೆಲಸಕ್ಕೆ ಬಾರದ ರಾಜನು ಇದ್ದಾನೆ ಎಂದು ತಿಳಿದುಕೊಂಡು ಆ ರಾಜ್ಯವನ್ನು ಕಸಿದುಕೊಳ್ಳಬೇಕೆಂದು ಅಕ್ಕಪಕ್ಕದ ರಾಜರು ದಂಡೆತ್ತಿ ಬರುವುದಕ್ಕೆ ಪ್ರಯತ್ನ ಮಾಡಿದರು.

10-30 A.M.

ಸ್ವಾಮಿ, ದಂಡು ಬರುತ್ತಿದೆ, ನಾವು ಯುದ್ಧಕ್ಕೆ ಸನ್ನದ್ಧರಾಗಬೇಕು, ಯುದ್ಧಕ್ಕೆ ತಯಾರಾಗಬೇಕು ಎನ್ನುವ ಆಶಯವನ್ನು ಪ್ರಧಾನಿಗಳು ದಂಡನಾಯಕರು ಎಲ್ಲರೂ ಹೇಳಿದರು. ಅದಕ್ಕೆ ಬರಲಿ, ಬರಲಿ ಎಂದು ಹೇಳಿದರು. ಹತ್ತಿರ ಬಂತು ಸ್ವಾಮಿ, ನೆಲಮಂಗಲದ ಹತ್ತಿರ ಬಂತು, ಇನ್ನೂ ಹತ್ತಿರ ಬಂತು, ಬೆಂಗಳೂರಿನ ಬಾಗಿಲಿಗೆ ಬಂತು ಸ್ವಾಮಿ ಎಂದು ಹೇಳಿದ್ದಾಗ, ಹಾಗೇನು, ಇನ್ನು ನನ್ನ ಕೌಪೀನ ತೆಗೆದುಕೊಂಡು ಬನ್ನಿ ಎಂದು ಆ ಕೌಪೀನವನ್ನು ಹಾಕಿಕೊಂಡು, ಹುಚ್ಚು ಮುಂಡೇ ಮಕ್ಕಳಾ, ನಿಮ್ಮ ರಾಜ್ಯ ನೀವೇ ನೋಡಿಕೊಳ್ಳಿ, ನನ್ನಷ್ಟಕ್ಕೆ ನಾನು ಹೋಗುತ್ತೇನೆ ಎಂದು ಹೇಳಿ ಹೊರಟುಹೋದ. ಇವತ್ತಿನ ದಿವಸ ನಿರಾಶೆ ನಮಗೆ ಕಾಣುತ್ತಿದೆ. ನಮ್ಮ ಮುಖ್ಯ ಮಂತ್ರಿಗಳ ಕಾಲದಲ್ಲಿ ಇದಾಗಬಾರದು. ಅವರು ನಮ್ಮ ಜಿಲ್ಲೆಯವರು. ನನಗೆ ಬಹಳ ಹೆಮ್ಮೆ. ಅವರು ಬಹಳ ಚೆನ್ನಾಗಿ ರಾಜ್ಯಭಾರ ಮಾಡಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ-ರೂರಲ್).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವಂಥ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತ ಒಕ್ಕಲುತನಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಷಯಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಮೈಸೂರು ರಾಜ್ಯದಲ್ಲಿ ಸುಮಾರು 28 ಲಕ್ಷ ಎಕರೆ ಜಮೀನಿನಲ್ಲಿ ಹತ್ತಿ ಬೆಳೆಯುತ್ತಾರೆ. ಈ 28 ಲಕ್ಷದಲ್ಲಿ ಸುಮಾರು 14 ಲಕ್ಷ ಎಕರೆಯಲ್ಲಿ ಈ ರಾಜ್ಯದ ಮುಂಬೈ ಭಾಗದಲ್ಲಿ ಬೆಳೆಯಲಾಗುವುದು, ಉಳಿದ 14 ಲಕ್ಷ ಎಕರೆ ಹೈದರಾಬಾದ್ ಭಾಗದಲ್ಲಿ ಮತ್ತು ಹಳೇ ಮೈಸೂರು ಭಾಗದ ಕಲ್ಲು ಜಿಲ್ಲೆಗಳಲ್ಲಿ ಬೆಳೆಯಲಾಗುವುದು. ಹತ್ತಿ ಪೈಕಿ ನಮ್ಮ ರಾಜ್ಯದಮಟ್ಟಿಗೆ ಹೇಳುವುದಾದರೆ ಎರಡು ಜಾತಿ ಇರುತ್ತದೆ. ಮೊದಲನೆಯದು ಲಕ್ಷ್ಮಿ, ಎರಡನೆಯದು ಜಯಧರ. ಈ ತರಹ ಎರಡು ಜಾತಿ ಹತ್ತಿ ಇರುತ್ತದೆ. ನಮ್ಮ ರಾಜ್ಯದಲ್ಲಿ 1950 ರ ಸುಮಾರಿಗೆ ಒಕ್ಕಲುತನ ಖಾತೆಯೊಳಗೆ ಪ್ರಚಾರಗೊಳಿಸಿ, ಪ್ರಸಾರಗೊಳಿಸಿ ಈ ಎರಡೂ ಹತ್ತಿ ಗಿಡಗಳ ಮಿಶ್ರತಳಿಯ ಬೀಜಗಳನ್ನು ಕೊಟ್ಟರು. ಇವೆರಡೂ ನಮ್ಮ ರಾಜ್ಯದಲ್ಲಿರುತ್ತವೆ. ಈ ಎರಡೂ ಹತ್ತಿ ಪೀಕುಗಳು ಪ್ರಚಾರದಲ್ಲಿ ಬಂದಮೇಲೆ ನಾಲ್ಕೆಂಟು ವರ್ಷಗಳವರೆಗೆ ಬಹಳ ಉತ್ತಮವಾಗಿ ಬರುತ್ತಿತ್ತು. ಲಕ್ಷ್ಮಿ ಹತ್ತಿ ಎಂದರೆ ಇಡೀ ಭಾರತ ದೇಶದಲ್ಲಿನ ಟೆಕ್ಸ್‌ಟೈಲ್ ಮಿಲ್ಸ್, ಅದರಲ್ಲಿಯೂ ಅಹಮದಾಬಾದ್ ಮತ್ತು ಗುಜರಾತಿನಲ್ಲಿರುವ ಹತ್ತಿ ಗಿರಣಿಗಳು ಲಕ್ಷ್ಮಿ ಹತ್ತಿಯನ್ನು ಕೊಳ್ಳುವ ಸಲುವಾಗಿ ನಮಗೆ ಬೇಕು, ನಮಗೆ ಬೇಕು ಎನ್ನುವ ಸ್ಪರ್ಧೆಯಿಂದ ಬಹಳ ಬೆಲೆ ಹೆಚ್ಚಿತು. ಅದರಂತೆ ಜಯಧರ ಹತ್ತಿಯೂ ಇತ್ತು. ಈ ಎರಡೂ ಜಾತಿಯ ಹತ್ತಿ ನಾಲ್ಕೆಂಟು ವರ್ಷಗಳವರೆಗೂ ಅಷ್ಟು ಉತ್ತಮವಾದ ರೀತಿಯಿಂದ ಬೆಳೆಯುತ್ತಿತ್ತು. ಅನಂತರ ಎಂದರೆ ಕಳೆದ ಎಂಟು ಹತ್ತು ವರ್ಷಗಳಿಂದ ಇದರೊಳಗೆ ಅವಹೀನತೆ ಇದೆ, ಗುಣದೊಳಗೆ ಕಡಮೆ ಇದೆ ಎಂದು ಲಕ್ಷ್ಮಿ ಹತ್ತಿಯನ್ನು ಖರೀದಿ ಮಾಡಲು ಗುಜರಾತ್ ಮತ್ತು ಅಹಮದಾಬಾದ್ ಮಿಲ್ಲುಗಳವರು ಹಿಂತೆಗೆದು ಸ್ಪಷ್ಟವಾಗಿ ಹೇಳಿದರು. ಕಳೆದ 8-10 ವರ್ಷಗಳಲ್ಲಿ ನಮ್ಮ ಲಕ್ಷ್ಮಿ ಮತ್ತು ಜಯಧರ ಹತ್ತಿಯ ಗುಣ ಕೆಟ್ಟಿದೆ, ಸ್ಟೇಪಲ್ ಕಡಮೆಯಾಗಿದೆ, ಬ್ರೈಟನೆಸ್ ಅಂದರೆ ಹೊಳಪು ಕೆಟ್ಟಿದೆ, ಸ್ಪಿನಿಂಗ್ ಕ್ವಾಲಿಟಿ ಕಡಮೆಯಾಗಿದೆ, ನಮ್ಮ ರಾಜ್ಯದಲ್ಲಿಯೇ ಉತ್ತಮವಾದ ಹತ್ತಿಗಳನ್ನು ಬೆಳೆಯುತ್ತಿದ್ದೇವೆಂದು ಈಗ ಆ ಮಿಲ್ಲುಗಳವರು ಹೇಳುತ್ತಿದ್ದಾರೆ.

(ಶ್ರೀ ಎಂ. ಆರ್. ಪಾಟೀಲ್)

ಸ್ವಾಮಿ, ಈ ಹತ್ತಿಯ ಗುಣ ಹಲವಾರು ದೃಷ್ಟಿಗಳಿಂದ ಕಡಮೆಯಾಗಿದೆ ಮತ್ತು ಅದರ ಉತ್ಪನ್ನವೂ ಎಂಟು ಹತ್ತು ವರ್ಷಗಳಿಂದ ಕಡಮೆಯಾಗುವುದಕ್ಕೆ ಹತ್ತಿದೆ. ಈ ವಿಚಾರದಲ್ಲಿ ತಜ್ಞರನ್ನು ಕೇಳಿದರೆ ಅವರು ಹೇಳುತ್ತಾರೆ. ಹೈಬ್ರಿಡ್ ಜಾತಿಯ ಬೀಜಗಳನ್ನು ತಯಾರು ಮಾಡಿ ಕಳಿಸುತ್ತಿದ್ದರು. ಹೈಬ್ರಿಡೈಸ್ ಮಾಡಿದ ಬೀಜಗಳನ್ನು ವರ್ಷ ವರ್ಷವೂ ಬಿತ್ತಿ, ಅದರಿಂದ ಬರುವ ಬೀಜಗಳನ್ನು ಪುನಃ ಬಿತ್ತುತ್ತ ಹೋದರೆ ಅದರಲ್ಲಿ ದೋಷಗಳು ಉತ್ಪನ್ನವಾಗಿ ಕ್ವಾಲಿಟಿ ಕಡಮೆಯಾಗುತ್ತದೆ. ಆದ್ದರಿಂದ ಪುನಃ ಹೈಬ್ರಿಡೈಸ್ ಮಾಡುವಂಥ ಮಿಶ್ರ ತಳಿಯ ಬೀಜಗಳನ್ನು ಉತ್ಪನ್ನ ಮಾಡಬೇಕು ಎಂದು ಹೇಳುತ್ತಾರೆ. ಲಕ್ಷ್ಮಿ ಮತ್ತು ಜಯಧರ ಹತ್ತಿ ಗಿಡಗಳಲ್ಲಿರುವ ಒಂದು ದೋಷವೆಂದರೆ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತಿದ ಮೇಲೆ ಮೂರು ನಾಲ್ಕು ತಿಂಗಳವರೆಗೆ ಹೂವು, ಕಾಯಿ ಎಲ್ಲ ಬಹಳ ಉತ್ತಮ ರೀತಿಯಿಂದ ಬೆಳೆಯುತ್ತದೆ. ಬೇಕಾದಷ್ಟು ಎಲೆ, ತೊಟ್ಟು ಇದ್ದು ಒಳ್ಳೆಯ ಪೀಕು ಬರಬಹುದು ಎಂದು ಹೇಳುವಂತೆ ಗಿಡಗಳು ಬೆಳೆದು ನಿಲ್ಲುತ್ತವೆ. ಜನವರಿ ತಿಂಗಳ ಮಧ್ಯದಲ್ಲಿ ಅಥವಾ ಜನವರಿ ತಿಂಗಳ ಅಂತ್ಯ ಅಥವಾ ಫೆಬ್ರವರಿ ತಿಂಗಳ ಮೊದಲನೆ ವಾರದಲ್ಲಿ ಬಹಳ ತೀವ್ರವಾಗಿ ಬರತಕ್ಕ ಮೂಡಣ ಗಾಳಿಗೆ ಸಿಕ್ಕಿ ಒಂದೇ ಸಲಕ್ಕೆ ಹತ್ತಿಯ ಎಲೆಗಳು ಮತ್ತು ಮೊಗ್ಗುಗಳು, ಸಣ್ಣ ಸಣ್ಣ ಕಾಯಿಗಳು ಕತ್ತರಿಸಿ ಹೋಗುತ್ತವೆ. ಹೀಗೆ ಆಗುವುದರಿಂದ ಹತ್ತಿಯ ಮೊದಲು ಪೀಕು ಕೈಗೆ ಹತ್ತುವುದಿಲ್ಲ. ಹತ್ತಿಯ ಗಿಡಗಳಲ್ಲಿ ಮೂರು ಸಲ ಬಿಡಿಸುವಂತೆ ಪೀಕು ಬರುತ್ತದೆ. ಮೊದಲನೆ ಪೀಕು ಬಹಳ ಉತ್ತಮವಾದುದು ಇರುತ್ತದೆ. ಆದರೆ ಮೂಡಣ ಗಾಳಿಗೆ ಸಿಕ್ಕಿ ಹೂವು, ಕಾಯಿ ಕತ್ತರಿಸಿ ಹೋಗುವುದರಿಂದ ಇಡೀ ಹತ್ತಿ ಪೀಕಿಗೆ ನಷ್ಟವುಂಟಾಗಿ ಮೊದಲನೆ ಪೀಕು ಕೈಗೆ ಹತ್ತುವುದಿಲ್ಲ. ಇದರಿಂದ ಉತ್ತಮವಾದ ಪೀಕು ನಮ್ಮ ಕೈಗೆ ಹತ್ತದಂತಾಗುತ್ತದೆ. ಎರಡನೇ ಮತ್ತು ಮೂರನೆ ಬಿಡುಗಳ ಪೀಕು ಬರುವಾಗ ಅಷ್ಟರೊಳಗೆ ಬೇಸಿಗೆ ಬರುತ್ತದೆ. ಅದರೊಳಗೆ ಎಳೆ ಸುಮಾರಾಗಿರುತ್ತದೆ; ಉದ್ದ ಕಡಮೆಯಾಗಿರುತ್ತದೆ, ಬಣ್ಣ ಕಡಮೆಯಾಗುತ್ತದೆ. ಆದ್ದರಿಂದ ಈ ಎರಡು ತಳಿಗಳ ಹತ್ತಿಗಳನ್ನೂ ಸುಧಾರಣೆ ಮಾಡುವುದು ಅತಿ ಅವಶ್ಯವಿರುತ್ತದೆ. ನಾನು ಸರ್ಕಾರಕ್ಕೆ ಒತ್ತಾಯಪಡಿಸುವುದು ಏನೆಂದರೆ ಎರಡೂ ತಳಿಗಳ ಹತ್ತಿಗೆ ಮೂಡಣ ಗಾಳಿಯನ್ನು ಎದುರಿಸುವಂಥ ರೆಸಿಸ್ಟೆನ್ಸ್ ಇರುವಂಥ ಹತ್ತಿಯನ್ನು ತಯಾರು ಮಾಡಬೇಕೆಂದು ಸರ್ಕಾರದವರಿಗೆ, ಸಂಶೋಧನೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯವಾಗಿ ಹೇಳುತ್ತೇನೆ.

ನಾವು ಇವತ್ತಿನ ದಿವಸ ನಮ್ಮ ರಾಜ್ಯದೊಳಗಿನ ಹತ್ತಿ ಪ್ರಮಾಣವನ್ನು ನೋಡಿದರೆ ಒಂದು ಹೆಕ್ಟೇರಿಗೆ ಅಂದರೆ ಎರಡೂವರೆ ಎಕರೆಗೆ 90 ಕೆ. ಜಿ. ಅರಳೆ ಬರುವಂಥ ಹತ್ತಿ ಬೆಳೆಯುತ್ತದೆ ಗುಜರಾತ್ ರಾಜ್ಯದೊಳಗಿನ ಹತ್ತಿ ಪ್ರಮಾಣವನ್ನು ನೋಡಿದರೆ ಅವರು ಒಂದು ಹೆಕ್ಟೇರಿಗೆ 146 ಕೆ. ಜಿ. ಅರಳೆ ಬರುವಂಥ ಹತ್ತಿಯನ್ನು ಉತ್ಪಾದನೆ ಮಾಡುತ್ತಾರೆಂದು ಕಂಡುಬರುತ್ತದೆ. ಹತ್ತಿಯ ಉತ್ಪಾದನೆ, ಹತ್ತಿಯ ಗಿಡಗಳನ್ನು ಬೀಜಗಳನ್ನು ಒಳ್ಳೆಯ ರೀತಿಯಿಂದ ಬೆಳೆಸುವುದರಲ್ಲಿ ನಾವು ವಿಫಲರಾಗಿದ್ದೇವೆ ಎನ್ನುವ ಮಾತನ್ನು ನಾನು ಸರ್ಕಾರದ ಗಮನಕ್ಕೆ ತಂದುಕೊಡುತ್ತೇನೆ. ಈ ಹತ್ತಿ ಬೀಜಗಳಲ್ಲಿ ಹೈಬ್ರಿಡೈಸೇಷನ್ ಮತ್ತು ಹೊಸ ತರಹ ಬೀಜಗಳನ್ನು ಮಾಡಲಿಕ್ಕೇ ಬೇಕು. ಇವತ್ತಿನ ದಿವಸ ಲಕ್ಷ್ಮಿ ಮತ್ತು ಜಯಧರ ಹತ್ತಿಗಳು ಗುಣದಲ್ಲಿ ಕಡಮೆಯಾಗಿವೆ. 20 ವರ್ಷದ ಹಿಂದೆ ತಯಾರಾದಂಥ ತಳಿಗಳು ಅವುಗಳ ಶಕ್ತಿಯನ್ನು ಕಳೆದುಕೊಂಡಿವೆ. ಹೊಸ ಬೀಜಗಳನ್ನು ತಯಾರು ಮಾಡಬೇಕು ಇಲ್ಲದೆ ಇದ್ದರೆ ನಮ್ಮ ರೈತರು ಹತ್ತಿ ಬೆಳೆಯುವುದನ್ನು ಬಿಟ್ಟು ಸೇಂಗಾ ಅಥವಾ ಬೇರೆ ಹಣ ಬರುವ ಬೆಳೆಗಳ ಕಡೆಗೆ ಹೊರಳುವರು ಎನ್ನುವುದರಲ್ಲಿ ಯಾವ ತರಹ ಸಂಶಯವೂ ಸಂದೇಹವೂ ಇಲ್ಲ.

ಹತ್ತಿ ಬೆಳೆಯುವ ರೈತರ ವಿಷಯದಲ್ಲಿ ಇನ್ನೊಂದು ಸಂಗತಿಯನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಹತ್ತಿ ಬೀಜಗಳನ್ನು ಹಂಚುವುದು ಮತ್ತು ಪ್ರಸಾರ ಮಾಡುವುದು ಇದನ್ನು ಒಕ್ಕಲುತನದ ಅಧಿಕಾರಿಗಳು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು. ಈ ಹತ್ತಿ ಬೀಜಗಳನ್ನು ಸೊಸೈಟಿಗಳ ಮುಖಾಂತರ, ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ಮತ್ತು ರಿಜಿಸ್ಟರ್ಡ್ ಸ್ಟಾಕಿಸ್ಟ್ಸ ಮುಖಾಂತರ ಹಂಚುತ್ತಿದ್ದಾರೆ. ಈ ಬೀಜಗಳನ್ನು ಹಂಚುವುದರಲ್ಲಿ ಪ್ರತಿಯೊಂದು ಕ್ವಿಂಟಲ್ ಹತ್ತಿ ಬೀಜಕ್ಕೂ ಮೂರು ರೂಪಾಯಿ 30 ಪೈಸೆ ಸರ್ಕಾರದವರು ಟ್ಯಾಕ್ಸ ಹೇರುತ್ತಿದ್ದಾರೆ. ಅದಕ್ಕೆ ಲೆವಿ ಎಂದು ಕರೆಯುತ್ತಾರೆ. ಜಯಧರ ಹತ್ತಿ ಬೀಜಕ್ಕೆ ಪ್ರತಿಯೊಂದು ಕ್ವಿಂಟಾಲಗೂ ಎರಡು ರೂಪಾಯಿ 35 ಪೈಸೆ ಟ್ಯಾಕ್ಸ್ ಹಾಕುತ್ತಾರೆ. ಈ ಟ್ಯಾಕ್ಸನ್ನು ಹೇರುವುದಕ್ಕೆ ಯಾವ ಕಾಯಿದೆ, ಯಾವ ಕಾನೂನು ಆಧಾರವಿದೆ ಎನ್ನುವಂಥದ್ದು ಕಂಡುಬಂದಿಲ್ಲ. ಕೇವಲ ಸರ್ಕಾರದ್ದೋ ಅಥವಾ ಇಲಾಖೆಯವರದ್ದೋ ಒಂದು ಆರ್ಡರ್ ಮೇಲೆ ಯಾವ ಸೊಸೈಟಿಗಳು

ಮತ್ತು ಮಾರ್ಕೆಟಿಂಗ್ ಸೊಸೈಟಿಗಳು ಈ ಬೀಜಗಳನ್ನು ಹಂಚುತ್ತವೆಯೋ ಆ ಸೊಸೈಟಿಗಳವರು ಒಂದು ಕ್ವಿಂಟಾಲಿಗೆ ಮೂರು ರೂಪಾಯಿ 30 ಪೈಸೆ, ಎರಡು ರೂಪಾಯಿ 35 ಪೈಸೆ ಟ್ಯಾಕ್ಸನ್ನು ವಸೂಲ್ಮಾಡುತ್ತಿದ್ದಾರೆ. ಈ ಹತ್ತಿ ಬೀಜಗಳನ್ನು ಸರ್ಕಾರದವರು ಪೂರೈಸುವುದಕ್ಕೆ ಟ್ಯಾಕ್ಸ್ ಏಕೆ ಹಾಕುತ್ತಾರೆ ಎಂದು ಕೇಳಿದರೆ, ಲೆವಿ ಏಕೆ ಹಾಕುತ್ತಾರೆ ಎಂದು ಕೇಳಿದರೆ ಇಲಾಖೆಯವರು ಹೇಳುತ್ತಾರೆ, ಸೆಲ್ಫ್ ಸಪೋರ್ಟಿಂಗ್ ಆಗತಕ್ಕದು ಇದೆ, ಹತ್ತಿ ಕಾಳನ್ನು ಉತ್ಪಾದನೆ ಮಾಡಿ, ಅದನ್ನು ಹಂಚುವ ಪದ್ಧತಿ ಏನು ಇದೆ ಅದು ಸೆಲ್ಫ್ ಸಪೋರ್ಟಿಂಗ್ ಆಗತಕ್ಕದು ಎಂದು ಇರುವುದರಿಂದ ಈ ರೀತಿ ಲೆವಿಯನ್ನು ವಸೂಲ್ಮಾಡಲಾಗುತ್ತಿದೆ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ

[MR. DEPUTY SPEAKER in the Chair]

ಯಾವುದೇ ಇತರ ಬೀಜಗಳ ಮೇಲೆ ಈ ಟ್ಯಾಕ್ಸನ್ನು ಹಾಕುತ್ತಾ ಇಲ್ಲ. ಹೀಗಿದ್ದರೂ ಹತ್ತಿ ಬೀಜಗಳ ಮೇಲೆ ಈ ಟ್ಯಾಕ್ಸನ್ನು ಏತಕ್ಕೆ ಹಾಕುತ್ತಾರೆ ಎನ್ನುವುದಕ್ಕೆ ನಮಗೆ ಕಾರಣ ತಿಳಿಯಲಿಲ್ಲ. ನಾನು ಸರ್ಕಾರಕ್ಕೆ ಒತ್ತಾಯ ಪಡಿಸುವುದು ಏನೆಂದರೆ, ಲಕ್ಷ್ಮೀಬೀಜ 3—30 ಪೈಸೇ, ಜೈಧರ್ ಬೀಜ 2—35 ಪೈಸೇ ಕ್ವಿಂಟಾಲ್ ಒಂದಕ್ಕೆ ಹಾಕುತ್ತಾರೆ. ಅದನ್ನು ರದ್ದುಪಡಿಸಬೇಕು. ಮತ್ತು ಇತರ ಬೀಜಗಳನ್ನು ಹಂಚುವುದಕ್ಕೆ ಏನು ಪದ್ಧತಿ ಇದೆ ಎಂದರೆ ಈ ಟ್ಯಾಕ್ಸನ್ನು ಹಾಕದೇ ಹಂಚುತ್ತಾರೆ. ಆ ಪ್ರಕಾರ ಹತ್ತಿ ಬೆಳೆಯುವ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಹತ್ತಿ ಬೆಳೆಯುವ ರೈತರ ಸಲುವಾಗಿ ಸಂಬಂಧಪಟ್ಟಂತೆ ಇನ್ನೊಂದು ವಿಷಯ ಹೇಳುವುದು ಏನೆಂದರೆ, ಹೋದ ವರ್ಷ ಸರ್ಕಾರದವರು ವಿಮಾನದ ಮೂಲಕ ಹತ್ತಿ ಬೀಜದ ಮೇಲೆ ಔಷಧಿಯನ್ನು ಸ್ಪ್ರೇ ಮಾಡುವ ಕಾರ್ಯಕ್ರಮವನ್ನು ಕೈಗೊಂಡರು. ಏರಿಯಲ್ ಸ್ಪ್ರೇಯಿಂಗ್ ನಮ್ಮ ಜಿಲ್ಲೆಯ ಗದಗ್ ತಾಲ್ಲೂಕಿನಲ್ಲಿ, ಹುಬ್ಬಳ್ಳಿ ತಾಲ್ಲೂಕಿನಲ್ಲಿ ಕೈಗೊಳ್ಳಲಾಯಿತು. ಯಾವ ಔಷಧಿಯನ್ನು ಸ್ಪ್ರೇ ಮಾಡಿದರು, ಯಾವ ತಾಲ್ಲೂಕಿಗೆ ಸ್ಪ್ರೇ ಮಾಡಿದರು, ಯಾವ ಕಾಲಕ್ಕೆ ಸ್ಪ್ರೇ ಮಾಡಿದರು ಎಲ್ಲ ಅದರ ಆಖೈರು ಪರಿಣಾಮ ಮಾತ್ರ ಈ ಸ್ಪ್ರೇಯಿಂಗ್‌ನಿಂದ ಹತ್ತಿಬೀಜದ ಮೇಲೆ ಏನೂ ಆಗಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗ ಸರ್ಕಾರದವರು ಏರಿಯಲ್ ಸ್ಪ್ರೇಯಿಂಗ್ ಮಾಡುತ್ತೇವೆ ಎಂದು ಪ್ರಚಾರ ಮಾಡುತ್ತಾ ಇದ್ದಾರೆ ಆದರೆ ಏರಿಯಲ್ ಸ್ಪ್ರೇಯಿಂಗ್ ಮಾಡಿದ್ದು ಯಾವ ತರಹ ಪ್ರಯೋಜನವೂ ಬರಲಿಲ್ಲ, ಅದು ವಿಫಲವಾಯಿತು ಎನ್ನುವ ಮಾತನ್ನು ಸ್ಥಳದ ವ್ಯವಸಾಯ ಇಲಾಖೆಯ ಅಧಿಕಾರಿಗಳೂ ಸಹ ಅದನ್ನು ಒಪ್ಪಿಕೊಳ್ಳುತ್ತಾರೆ. ಕಾರಣ ಕೇಳಿದರೆ ಹೇಳುತ್ತೇನೆ. ಅದು ಬಹಳ ಲೇಟ್ ಸ್ಟೇಜಿನಲ್ಲಿ ಆಯಿತು. 2—3 ಬಾರಿ ಸ್ಪ್ರೇ ಆಗತಕ್ಕಂಥಾದ್ದು ಒಂದೇ ಬಾರಿ ಸ್ಪ್ರೇ ಆಗಿರುವುದರಿಂದ ಪರಿಣಾಮಕಾರಿಯಾಗಲಿಲ್ಲ ಎಂದು ಅವರು ಹೇಳುತ್ತಾರೆ. ಆದರೆ ಸರ್ಕಾರಿ ಅಧಿಕಾರಿಗಳು ಮೊದಲೇ ತಿಳಿದುಕೊಳ್ಳಬೇಕಾಗಿತ್ತು. ಲೇಟ್‌ಸ್ಟೇಜಿನಲ್ಲಿ ಸ್ಪ್ರೇ ಮಾಡಬಾರದಾಗಿತ್ತು. ಒಂದೇ ಬಾರಿ ಸ್ಪ್ರೇ ಮಾಡಿದರೆ ಪರಿಣಾಮಕಾರಿ ಆಗುವುದಿಲ್ಲ ಎನ್ನುವುದನ್ನು ಅರಿತು, ಈ ತರಹ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ ಎಂದು ತಿಳಿದುಕೊಳ್ಳಬೇಕಾಗಿತ್ತು. ಏರಿಯಲ್ ಸ್ಪ್ರೇ ಖರ್ಚಿನಲ್ಲಿ ಕೇಂದ್ರ ಸರ್ಕಾರ 100ಕ್ಕೆ 50 ರೂಪಾಯಿ, ಸ್ಟೇಟ್ ಸರ್ಕಾರ 100ಕ್ಕೆ 25 ರೂಪಾಯಿ ಉಳಿದದ್ದು 100ಕ್ಕೆ 25 ರೂಪಾಯಿ ರೈತರು ಹೊರಬೇಕು ಎಂದು ನಿಯಮ ಇದ್ದುದರಿಂದ ಹೋದವರ್ಷ ೫ ರೂಪಾಯಿ ಏರಿಯಲ್ ಸ್ಪ್ರೇಯಿಂಗ್ ಸಲುವಾಗಿ ಗದಗ್ ಸೊಸೈಟಿಯವರು ಮತ್ತು ಹುಬ್ಬಳ್ಳಿ ಸೊಸೈಟಿಯವರು ಕೊಡುವಂತೆ ಮಾಡಿದರು. ಏರಿಯಲ್ ಸ್ಪ್ರೇಮಾಡಿದ್ದು ಪರಿಣಾಮಕಾರಿ ಆಗದೇ ಇರುವುದರಿಂದ ಈ ಹಣವನ್ನು ವಸೂಲ್ ಮಾಡುವುದು ಕಠಿಣವಾಗಿದೆ. ಈ ವರ್ಷವೂ ಸಹ ವ್ಯವಸಾಯ ಇಲಾಖೆಯವರು ಹತ್ತಿಮೇಲೆ ಏರಿಯಲ್ ಸ್ಪ್ರೇಯಿಂಗ್, ಶೇಂಗಾ ಮೇಲೆ ಏರಿಯಲ್ ಸ್ಪ್ರೇಯಿಂಗ್ ಮಾಡಿಕೊಳ್ಳುವುದಾದರೆ, ಉತ್ತಮ ಔಷಧಿ ಉಪಯೋಗ ಮಾಡಿಕೊಳ್ಳಬೇಕು. ಈವೊತ್ತಿನ ದಿವಸ ಒಕ್ಕಲಿಗರು ಕೊಡಬೇಕಾದಂಥ ಪ್ರಮಾಣ 100ಕ್ಕೆ 50 ರೂಪಾಯಿ ಬೀಳುತ್ತದೆ ಎಂದು ವ್ಯವಸಾಯ ಇಲಾಖೆಯ ಅಧಿಕಾರಿಗಳು ಹೇಳುತ್ತಾ ಇದ್ದಾರೆ. ಒಂದು ಎಕರೆಗೆ 50 ರೂಪಾಯಿ ಕೊಡುವುದು ಎಂದರೆ ನಿಜವಾಗಿಯೂ ಕಷ್ಟಕರವಾದ ಮಾತು. ಈ ರೀತಿ ಒಕ್ಕಲಿಗರಿಗೆ ಭಾರವನ್ನು ಹಾಕಿ ಏರಿಯಲ್ ಸ್ಪ್ರೇಯಿಂಗ್ ಕೈಗೊಳ್ಳುವುದಾದರೆ ಈಗಿನಿಂದಲೇ ಈ ಕಾರ್ಯಕ್ರಮವನ್ನು ಸಮುಚಿತನಾಗಿ ತಯಾರಿ ಮಾಡತಕ್ಕದ್ದು.

ಶ್ರೀ ಕೆ. ಎಚ್. ಪಾಟೀಲ್.—ಏರಿಯಲ್ ಸ್ಪ್ರೇಯಿಂಗ್ ಏನು ಇದೆ, ಅದು ಸೊಸೈಟಿಯಿಂದ ಆಗಲಿ ಯಾವುದೇ ಒಂದು ಕಡೆಯಿಂದ ತೆಗೆದುಕೊಳ್ಳುವುದರಿಂದ ತೊಂದರೆಯಾಗುತ್ತದೆ. ಸರ್ಕಾರದವರೇ ಸಹಾಯ ಮಾಡಬೇಕು. ಪೆಸ್ಟ್ ಕಂಟ್ರೋಲ್ ಆಕ್ಟ್ ಲಾಗು ಮಾಡಿ, ಏರಿಯಲ್ ಸ್ಪ್ರೇಯಿಂಗ್ ತೆಗೆದುಕೊಳ್ಳುವುದರಿಂದ ಉತ್ತಮವಾಗುತ್ತದೆ. ಇದನ್ನು ಎಲ್ಲಾ ಸ್ಟೇಟಿನಲ್ಲಿ ತೆಗೆದುಕೊಂಡಿದ್ದರೂ

(ಶ್ರೀ ಕೆ. ಎಚ್. ಪಾಟೀಲ್)

ಹವಮಾನದ ಪರಿಣಾಮವಾಗಿ ಸ್ಪ್ರೇಯಿಂಗ್ ಮಾಡಿದ್ದರಿಂದ ಹೊಲದಲ್ಲಿದ್ದ ಹತ್ತಿ ನಾಶವಾಯಿತು. ಅದರಿಂದ ಅಷ್ಟು ಪರಿಣಾಮಕಾರಿಯಾಗಲಿಲ್ಲ. ಈ ರೀತಿ ಜನರಲ್ಲಿ ಅಸಮಾಧಾನ ಉಂಟಾಗಿರುವುದರಿಂದ ಸರಕಾರದವರೇ ಪೆಸ್ಟ್ ಕಂಟ್ರೋಲ್ ಆಕ್ಟ್ ಲಾಗು ಮಾಡಿ. ಸೊಸೈಟಿಯವರು ಕೋಆಪರೇಷನ್ ಕೊಟ್ಟು ಮಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಆರ್. ಪಾಟೀಲ್.—ಶ್ರೀಮಾನ್ ಕೆ. ಹೆಚ್. ಪಾಟೀಲರ ಸೂಚನೆ ತೆಗೆದುಕೊಂಡಿದ್ದೇನೆ. ಒತ್ತಾಯಪೂರ್ವಕವಾಗಿ ಏರಿಯಲ್ ಸ್ಪ್ರೇ ತೆಗೆದುಕೊಳ್ಳುವುದಕ್ಕೆ ಒಪ್ಪುವುದಿಲ್ಲ. ಏರಿಯಲ್ ಸ್ಪ್ರೇ ಖರ್ಚು ರೈತ ಹೊರತಕ್ಕದ್ದು. ಅವನಿಗೆ ಎಕರೆಗೆ 50 ರೂಪಾಯಿ ಆಗುತ್ತದೆ. ಈ ಪೀಕು ಒಣ ಭೂಮಿ ಮೇಲೆ ಬರುವ ಪೀಕು. ಮಳೆ ಮೇಲೆ ಅವಲಂಬಿಸಿರುತ್ತದೆ ಹವಮಾನದಮೇಲೂ ಅವಲಂಬಿಸಿರುತ್ತದೆ. ಮಳೆ ಬರದೇ ಪೀಕು ನಾಶ ಆದರೆ ಅದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಅದ್ದರಿಂದ ಏರಿಯಲ್ ಸ್ಪ್ರೇಯಿಂಗನ್ನು ಒತ್ತಾಯ ಪೂರ್ವಕವಾಗಿ ತೆಗೆದುಕೊಂಡರೂ ಅದರಿಂದ ಹೆಚ್ಚು ಅನುಕೂಲವಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸಬ್ಸಿಡಿ ಸ್ಕೀಮು ಈ ವರ್ಷವೂ ಇದೆ.

settle a dispute, the villagers were sure that justice would be done. I suggest that we should maintain it. Our administration is one of the best known administrations in the world; the frame work is very good. Sometimes if it goes wrong, may I say that it is due to men like us who interfere with the exeeutive? We should not do that. One big administrator when he was the Chief Minister insisted that the legislature and the executive should be separated, that the legislator should not interfere with the executive. I think that that was a very good advice and if in a country like France or England the administration goes on smoothly, it is because nobody interferes with the administration, no matter which party is in power. If any administrator makes a mistake, he is of course taken to task and he is punished. I thank you, Sir, very much. With these observations I support the Demands that are moved by the Chief Minister.

†ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಮಾನ್ಯ ಅಧ್ಯಕ್ಷರೇ, ನಾನು ಈದಿನ ಕನ್ನಡದಲ್ಲಿ ಮಾತನಾಡುತ್ತೇನೆ. ಅದರಲ್ಲಿ ಏನಾದರೂ ಸ್ವಲ್ಪ ತಪ್ಪು ಅದರೆ ಯಾರೂ ಮಧ್ಯೆ ದಯವಿಟ್ಟು ಅಡಚಣೆ ಮಾಡಬೇಡಿ. ಸ್ವಾಮಿ, ನನಗೆ ಈದಿನ ಬಹುಶಃ ಸ್ವಲ್ಪ ಕಾಲಾವಕಾಶ ಸಿಕ್ಕಿದೆಯೆಂದು ಕಾಣುತ್ತದೆ. ನಾನು ಮಾತನಾಡುವಾಗ್ಗೆ ಮಧ್ಯೆ ಮಧ್ಯೆ ಸುಮ್ಮನೆ ಇಂಟರ್‌ಫಿಯರ್ ಮಾಡಿ, ನನ್ನ ಕಾಲಾವಕಾಶವನ್ನು ಕಳೆಯಬೇಡಿ ಎಂದು ಎಲ್ಲ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ. ಈಗ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ನಾನು ಮೊದಲು ಮಾತನಾಡುತ್ತೇನೆ. ಅಡ್ಮಿನಿಸ್ಟ್ರೇಷನ್ ಈಗ ಯಾವ ಮಟ್ಟದಲ್ಲಿ ಬಂದಿದೆಯೆಂದು ಹೇಳಿದರೆ ಅದು ದೇವರೇ ಗತಿ; ಶ್ರೀ ನಾಗನಗೌಡರು ಮಾತನಾಡುತ್ತಾ ಲೆಜಿಸ್ಲೇಟರ್ಸ್ ಎಗ್ಜಿಕ್ಯುಟಿವ್‌ನಿಂದ ಬೇರೆ ಇರಬೇಕು, ಅವರು ಅಡಳಿತದ ಬಗ್ಗೆ ಮಧ್ಯೆ ಇಂಟರ್‌ಫಿಯರ್ ಮಾಡುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ಹೇಳಿದರು. ಅಸೆಂಬ್ಲಿಯ ಸದಸ್ಯರುಗಳಿಗೆ ಆಫೀಸುಗಳಲ್ಲಿ ಮಾನ್ಯತೆ ಇಲ್ಲವೇ ಇಲ್ಲ. ಈ ವಿಚಾರವನ್ನು ನಾವು ಮೊದಲು ಮಂತ್ರಿಮಂಡಲದವರಿಗೆ ಹೇಳಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ರಾಮರಾಯರ ಮಂತ್ರಿ ಮಂಡಲವನ್ನು ಮಾಡಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ಈಗಿನ ಮಂತ್ರಿಮಂಡಲದವರು ಅಧಿಕಾರಕ್ಕೆ ಬಂದ ತಕ್ಷಣ ಯಾರಿಗೆ ಯಾರು ಯಾರು ಬೇಕೋ ಅವರನ್ನು ಅನೇಕ ಇಲಾಖೆಗಳಲ್ಲಿ ಎಲ್ಲೆಲ್ಲಿಂದ ಯಾರು ಯಾರನ್ನೋ ತೆಗೆದುಕೊಂಡುಬಂದು ಹಾಕಿದ್ದಾರೆ. ಇದನ್ನು ಸ್ವಲ್ಪ ವಿಚಾರಮಾಡಿ ನೋಡಿದರೆ, ಶ್ರೀಮಾನ್ ರಾಚಯ್ಯನವರು ರೆವಿನ್ಯೂ ಇಲಾಖೆಯ ಮಂತ್ರಿಗಳಾಗಿ ಬಂದರು ಅವರ ಡಿಸ್ಟ್ರಿಕ್ಟಿನಲ್ಲಿ ಅವರಿಗೆ ಯಾರು ಯಾರು ಬೇಕೊ ಅವರನ್ನು ತೆಗೆದುಕೊಂಡು ಬಂದು ಹಾಕಿದ್ದಾರೆ. ಶ್ರೀಮಾನ್ ಪುಟ್ಟಸ್ವಾಮಿಯವರು ಮಂತ್ರಿಗಳಾಗಿ ಬಂದರು. ಅವರಿಗೆ ಯಾರು ಯಾರು ಬೇಕೊ ಅವರನ್ನು ತೆಗೆದುಕೊಂಡು ಬಂದು ಹಾಕಿದ್ದಾರೆ. ಈರೀತಿ ಇವರು ಮಂತ್ರಿಗಳಾದ ತಕ್ಷಣ ಅನೇಕ ಟ್ರಾನ್ಸ್‌ಫರ್‌ಗಳನ್ನು ಮಾಡಿದ್ದಾರೆ. 3 ತಿಂಗಳು 6 ತಿಂಗಳು ಆಗಿದ್ದವರನ್ನೆಲ್ಲಾ ಟ್ರಾನ್ಸ್‌ಫರ್ ಮಾಡಿದ್ದಾರೆ. ಈ ಅನ್ಯಾಯ ಎಲ್ಲಿಯವರೆಗೆ ಆಗುತ್ತದೆ! ನಾವು ಪ್ರಜೆಗಳ ಪ್ರತಿನಿಧಿಗಳಾಗಿ ಈ ಸಭೆಗೆ ಬಂದಿರುವುದು ಏನೋ ಮಾತನಾಡಿ ಕೇವಲ 16 ರೂಪಾಯಿಗಳನ್ನು ತೆಗೆದುಕೊಂಡು ಹೋಗಲು ಬಂದಿಲ್ಲ. ನಡೆಯುವ ಅನ್ಯಾಯಗಳನ್ನು ಹೇಳಲೇಬೇಕು. ಮಾನ್ಯತೆ ಪಡೆಯುವುದರಲ್ಲಿ ದರ್ಜೆಯಲ್ಲಿ ನಾವೇನು ಮಂತ್ರಿಗಳಿಗಿಂತ ಕಡಿಮೆ ಇಲ್ಲ. ಮಂತ್ರಿಮಂಡಲದವರು ಸರ್ಕಾರವನ್ನು ನಡೆಸುತ್ತಿದ್ದಾರೆ. ನಾವು ಜನಗಳ ಪ್ರತಿನಿಧಿಗಳು, ಈ ಸರ್ಕಾರ ಜನಗಳ ಸರ್ಕಾರ. ಆದ್ದರಿಂದ ಮಂತ್ರಿಗಳಿಗೆ ಎಷ್ಟು ಮಾನ್ಯತೆ ಇದೆಯೋ ಅಷ್ಟೇ ಮಾನ್ಯತೆ ಸದಸ್ಯರಿಗೂ ಇದೆ. ಈ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಬಂದಿದೆಯೆಂದರೆ, ಈ ರಾಜ್ಯವನ್ನು ಬಂಡವಾಳ ಷಾಹಿಗಳ ಅಪ್ಪನ ರಾಜ್ಯವನ್ನಾಗಿ ಮಾಡಿದ್ದಾರೆ. ಈಗ ಅಸೆಂಬ್ಲಿಯ ಸದಸ್ಯರುಗಳು ಕೆಲವು ಆಫೀಸುಗಳಿಗೆ ಹೋದರೆ ಅವರಿಗೆ ಸರಿಯಾದ ಗೌರವ ಸಿಕ್ಕುತ್ತಾ ಇಲ್ಲ. ಪ್ರಜಾಪ್ರಭುತ್ವ ಎಂದು ಹೇಳುವ ಮಾತೇ ಇಲ್ಲ. ಆಫೀಸುಗಳಲ್ಲಿ ಆಫೀಸರುಗಳು ಮನಸ್ಸಿಗೆ ಬಂದಹಾಗೆ ಮಾತನಾಡುತ್ತಾರೆ. ಈಗ ಅಡ್ಮಿನಿಸ್ಟ್ರೇಷನಿನಲ್ಲಿ ಉದಾಹರಣೆಗೆ ಹೇಳುವುದಾದರೆ, ಪ್ರಜಾಪ್ರಭುತ್ವ ಬಂದಮೇಲೆ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಅಡೀಷನಲ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್, ಸೆಕ್ರೆಟರಿ,

ಜಾಯಿಂಟ್ ಸೆಕ್ರೆಟರಿ, ಅಡೀಷನಲ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಹೀಗೆ ಒಬ್ಬರಿಗೊಬ್ಬರಿಗೆ ಜಂಟಿಮಾಡಿ ಒಂದು ಇಂಜಿನ್ನಿಗೆ 20 ವ್ಯಾಗೆನ್‌ಗಳನ್ನು ಹಾಕಿ ಆ ಇಂಜಿನ್‌ಗಳು ಸರಿಯಾಗಿ ನಡೆಯುವುದಿಲ್ಲ. ಆಫೀಸುಗಳಲ್ಲಿ ಒಂದು ಕಾಗದ ಮೂವ್ ಆಗ ಬೇಕಾದರೆ ಸೆಕ್ರೆಟರಿಯಿಂದ ತಹಶೀಲ್ದಾರರಿಗೆ ಬರಬೇಕಾದರೆ 365 ದಿವಸಗಳಾಗುತ್ತವೆ. ಪುನಃ ತಹಶೀಲ್ದಾರ್‌ರಿಂದ ಸೆಕ್ರೆಟರಿಗೆ ಬರಬೇಕಾದರೆ 365 ದಿವಸ ಆಗುತ್ತದೆ. ಆಮೇಲೆ ಆ ಕಾಗದದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ ಎಷ್ಟೋ ದಿವಸ ಆಗುತ್ತದೆ. ಎಂ. ಎಸ್. ಆರ್. ಟಿ. ಸಿ. ನಲ್ಲಿ ಒಬ್ಬ ನೌಕರನಿಗೆ ಪ್ರಮೋಷನ್ ಕೊಟ್ಟಿದ್ದ ವಿಚಾರ ಹೇಳುತ್ತೇನೆ. ಅವನಿಗೆ ಪ್ರಮೋಷನ್ ಆಗಿದೆ ಎನ್ನುವ ಕಾಗದ ಅವನು ಸ್ವರ್ಗಕ್ಕೆ ಹೋದಮೇಲೆ ಹೋಯಿತು. ಅಂದರೆ ಅವನು ಸತ್ತಮೇಲೆ ಅವನಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ರೋಗಿಗೆ ಒಂದು ಬೆಡ್ ಅಲಾಟ್ ಮಾಡಬೇಕಾದರೆ ರೋಗಿ ಸತ್ತು ಸ್ವರ್ಗಕ್ಕೆ ಹೋದಮೇಲೆ, ನಿನಗೆ ಬೆಡ್ ಅಲಾಟ್ ಮಾಡಿದ್ದೇವೆ ಎಂದು ಪತ್ರ ಬರುತ್ತದೆ. ವಿದ್ಯಾಭ್ಯಾಸದ ಇಲಾಖೆಯ ವಿಷಯವನ್ನಂತೂ ಹೇಳಲೇಬೇಡಿ. ಅಲ್ಲಿಗೆ ಕಾಗದವನ್ನು ಬರೆದರೆ ಉತ್ತರವೇ ಬರುವುದಿಲ್ಲ. ಇದಕ್ಕೆ ಪ್ರೂಫ್ ಏನೆಂದರೆ, ಶಾಸನಸಭಾ ಸದಸ್ಯರಿಗೆ ಪ್ರತ್ಯೇಕವಾದ ರಿಜಿಸ್ಟರ್ ಮೇಂಟೇನ್ ಮಾಡಿ ಅವರಿಗೆ ಸರಿಯಾಗಿ ಉತ್ತರ ಕೊಡಬೇಕೆಂದು ಒಂದು ಸರ್ಕ್ಯುಲರನ್ನು ಸರ್ಕಾರದವರು ಹೊರಡಿಸಿದ್ದಾರೆ. ಅದಕ್ಕೆ ಇದೇ ಪ್ರೂಫ್. (ಮಾನ್ಯ ಸದಸ್ಯರು ಆ ಸರ್‌ಕ್ಯುಲರನ್ನು ಸಭೆಯಲ್ಲಿ ಎತ್ತಿ ತೋರಿಸಿದರು) ಇನ್ನೊಂದು ಸರ್‌ಕ್ಯುಲರ್ ಇಂಡಿಯಾ ಸರ್ಕಾರದಿಂದ ಬಂದಿದೆ. ಅದೇನೆಂದರೆ, ಆಫೀಸುಗಳಿಗೆ ಶಾಸನಸಭಾ ಸದಸ್ಯರು ಹೋದಾಗ ಅಧಿಕಾರಿಗಳು ಎದ್ದುನಿಂತು ಅವರಿಗೆ ಮರ್ಯಾದೆ ಗೌರವ ಕೊಡಬೇಕೆಂದಿದೆ. ಈ ಮರ್ಯಾದೆಯನ್ನು ಕೊಡುವುದರಲ್ಲಿಯೂ ಎ. ಬಿ. ಸಿ. ಡಿ. ಎಂಬ ದರ್ಜೆ ಇದೆ. ರಾಜಕೀಯದಲ್ಲಿ ಕಾನ್ಸ್ಟಿಟ್ಯೂಷನ್ ರೈಟ್ಸ್ ಇಟ್ಟುಕೊಂಡು ಕೆಲಸಮಾಡುತ್ತಾ ಕಾನ್ಸ್ಟಿಟ್ಯೂಷನ್ ಅನ್ನು ಒಪ್ಪಿಕೊಂಡಿದ್ದರೂ ಕೂಡ ಜಾತಿ, ಮತ, ಭೇದಭಾವನೆಯನ್ನು ಇಟ್ಟುಕೊಂಡಿದ್ದಾರೆ. ಈಗ ಯಾರಾದರೂ ಒಂದು ಜಾತಿಯ ಒಬ್ಬ ಅಧಿಕಾರಿ ಇದ್ದರೆ ಅಲ್ಲಿಗೆ ಬೇರೆ ಯಾರಾದರೂ ನೌಕರರು ಬರಬೇಕಾದರೆ ಅವನ ಜಾತಿಯವನೇ ಅಲ್ಲಿಗೆ ಬರಬೇಕು. ಈ ರೀತಿ ಆಗಿದೆ. ಈಗ ಮೆಡಿಕಲ್ ಇಲಾಖೆಯ ವಿಷಯವನ್ನು ಹೇಳಬೇಕಾದರೆ ಅದು ಎಲ್ಲರಿಗೂ ಬೇಕು. ರೋಗಗಳನ್ನು ವಾಸಿಮಾಡುವುದಕ್ಕೆ ಆ ಇಲಾಖೆ ಎಲ್ಲರಿಗೂ ಬೇಕು. 4-5 ಜನ ಜಾಯಿಂಟ್ ಡೈರೆಕ್ಟರಿದ್ದಾರೆ. ಡೀಸೆಂಟ್ರಲೈಜೇಷನ್ ಆಫ್ ಪವರ್ಸ್ ಅಧಿಕಾರ ವಿಕೇಂದ್ರೀಕರಣ ಆಗಿಲ್ಲ. ಬ್ರಿಟಿಷ್‌ನವರ ಕಾಲದಲ್ಲಿ ರಾಜ ಮಹಾರಾಜರ ಕಾಲದಲ್ಲಿ ಯಾರು ಯಾರಿಗೆ ಏನೇನು ಅಧಿಕಾರ ಇತ್ತೋ ಅದೇ ಅಧಿಕಾರ ಈಗಲೂ ಇದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಇನ್ನೂ ಸರಿಯಾಗಿ ಅಧಿಕಾರ ವಿಕೇಂದ್ರೀಕರಣವಾಗಿಲ್ಲ. ನಾವೇನೋ ನಮಗೆ ಸ್ವಾತಂತ್ರ್ಯ ಬಂದಮೇಲೆ ಸುಲಭವಾಗಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತವೆ, ಜನಗಳಿಗೆ ಉಪಕಾರವಾಗುತ್ತದೆ ಎಂದರೆ ಅದೇನೂ ಆಗಲಿಲ್ಲ. ಯಾವುದಾದರೂ ಒಂದು ಕೆಲಸ ಆಗಬೇಕಾದರೆ ಡೆಪ್ಯುಟಿ ಕಮೀಷನರಿಂದ ಡಿವಿಜನಲ್ ಕಮೀಷನರಿಗೆ ಬರಬೇಕು, ಡಿವಿಜನಲ್ ಕಮೀಷನರಿಂದ ಸೆಕ್ರೆಟರಿಗೆ ಬರಬೇಕು. ಸೆಕ್ರೆಟರಿಯು ಸಂಬಂಧಪಟ್ಟ ಮಂತ್ರಿಗಳನ್ನು ಕೇಳದೆ ಏನೂ ಮಾಡುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ಏನಾದರೂ ಕ್ರಾಂತಿ ಆದರೆ ಅದಕ್ಕೆ ಅಧಿಕಾರಿಗಳೇ ಜವಾಬ್ದಾರಿ. ದೇಶದಲ್ಲಿ ಕೆಲಸಕಾರ್ಯಗಳು ನಡೆಯುವುದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಮಂಜೂರು ಮಾಡಿದ್ದಾರೆ. ಇವರು ಅಧಿಕಾರಕ್ಕೆ ಬಂದಮೇಲೆ ಯಾವುಯಾವುದಕ್ಕೋ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕೆಲಸಗಳನ್ನು ಮಾಡುವುದು ಬೇಡ ಎಂದು ನಾನು ಹೇಳುತ್ತಿಲ್ಲ. ಕೆಲಸವನ್ನು ಮಾಡುವಾಗ ಸ್ವಲ್ಪ ತಿಳಿದುಕೊಂಡು ಮಾಡಿ. ಈಗ ಈ ಸರ್ಕಾರದ ಆಡಳಿತದಲ್ಲಿ ಇವರು ವಿರೋಧ ಪಕ್ಷದವರು, ಇವರು ಕಾಂಗ್ರೆಸ್ ಪಕ್ಷದವರು ಎನ್ನುವ ಭೇದಭಾವವನ್ನಿಟ್ಟುಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆಯೇ ಹೊರತು ಆಯಾ ಕೆಲಸದ ದರ್ಜೆ, ಮೆರಿಟ್ ಮೇಲೆ ಈ ಸರ್ಕಾರದಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಮುಖ್ಯಮಂತ್ರಿಗಳು ಕೈಗಾರಿಕೆ, ವ್ಯವಸಾಯ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಈ ಮೂರು ಪೋರ್ಟ್‌ಪೋಲಿಯೋಗಳನ್ನು ಇಟ್ಟುಕೊಂಡಿದ್ದಾರೆ, ಇದರ ಜೊತೆಗೆ ಅವರು ರಾಜಕೀಯದಲ್ಲಿ ದುಡಿಯಬೇಕು. ಒಂದು ಪಕ್ಷ ಪಾರ್ಟಿಯಲ್ಲಿಯೂ ಕೆಲಸ ಮಾಡಬೇಕಾಗುತ್ತದೆ. ಈ ರೀತಿ ಅವರು 24 ಘಂಟೆಯ ಕಾಲವೂ ಶ್ರಮಪಟ್ಟು ದುಡಿಯಬೇಕಾಗುತ್ತದೆ. ಅವರಿಗೆ ಇವುಗಳನ್ನೆಲ್ಲಾ ನಿರ್ವಹಣೆ ಮಾಡುವ ಕಾಲದಲ್ಲಿ ಕಾಲಾವಕಾಶವೇ ಇರುವುದಿಲ್ಲ. ಕೈಗಾರಿಕೆ ಇಲಾಖೆಯಲ್ಲಿ ರೆಮ್ಕೋ ಫ್ಯಾಕ್ಟರಿ ಮುಚ್ಚುವ ಪರಿಸ್ಥಿತಿಯಲ್ಲಿದೆ. ಬೆಳಗೊಳದಲ್ಲಿರುವ ಎಂ. ಸಿ. ಎಫ್. ಫ್ಯಾಕ್ಟರಿಯು ಅರ್ಧ ಜೀವ ಬಿಟ್ಟಿದೆ. ಅದೂ ಹೋಗುತ್ತದೆ. ಗುಲ್ಬರ್ಗಾದಲ್ಲಿ ಒಂದು ಮಿಲ್ಲು ಕ್ಲೋಜ್ ಆಯಿತು. ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ ಕ್ಲೋಜ್ ಆಯಿತು. ಈ ಕೈಗಾರಿಕೆಯ ಇಲಾಖೆಯ ವಿಷಯವನ್ನು ಸತ್ಯವಾಗಿ ಹೇಳಬೇಕಾದರೆ ಇದು ಒಂದು ದೊಡ್ಡ ರ್ಯಾಕೆಟ್ ಆಗಿದೆ. ಆಮೇಲೆ ಶ್ರೀಮಾನ್ ರಾಮರಾಯರ ಕೈಯಲ್ಲಿ ಪೋಲೀಸ್ ಇಲಾಖೆಯನ್ನು ಕೊಟ್ಟಿದ್ದಾರೆ. ಪೋಲೀಸಿನವರ ಹಾವಳಿಯಲ್ಲಿ ಯಾರೂ

(ಶ್ರೀ ಅಜೀಜ್ ಸೇಟ್)

ಏನೂ ಮುಂದೆಬಂದು ಕೆಲಸ ಮಾಡುವುದಕ್ಕಾಗುವುದಿಲ್ಲ. ಇದೂ ಒಂದು ದೊಡ್ಡ ರ್ಯಾಕೆಟ್ ಇದೆ. ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರು ಶ್ರೀಮಾನ್ ಶಾಮಣ್ಣನವರು ಬಹಳ ಹಳೆಯಕಾಲದವರು. ಅವರು ಎಷ್ಟು ಕೈಗಾರಿಕೆಗಳಿಗೆ ಚೇರ್ಮನರಾಗಿದ್ದಾರೆ ಎಂಬುದಕ್ಕೆ ಲೆಕ್ಕವೇ ಇಲ್ಲ. ಡೆವಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್ ಕಮಿಟಿಯಲ್ಲಿ ಕೆಲವು ಜನ ಸದಸ್ಯರಿದ್ದಾರೆ. ಎಲ್ಲಿಗೆ ಹೋದರೂ ಕೂಡ ಆ 3-4 ಜನಗಳೇ ಇದ್ದಾರೆ. ಇದು ಏನಾಗಿದೆ ಎಂದರೆ, ಪೇಟೆಂಟ್ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಇದ್ದ ಹಾಗೆ ಆಗಿದೆ. ಟಿ.ಎ., ಡಿ.ಎ. ಸೌಕರ್ಯವನ್ನು ಪಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಕೈಗಾರಿಕೆಗಳ ಅಭಿವೃದ್ಧಿ ಸರಿಯಾಗಿ ನಡೆಯುತ್ತಿಲ್ಲ. ದೇಶದಲ್ಲಿ ನಿರುದ್ಯೋಗ ಜಾಸ್ತಿಯಾಗುತ್ತಿದೆ. ಸರ್ಕಾರದವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸನ್ನು ಇಟ್ಟಿದ್ದಾರೆ. ಈ ಕೈಗಾರಿಕೆಯ ಇಲಾಖೆಯಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನ ಮೂಲಕ ಯಾರನ್ನಾದರೂ ಕೆಲಸಕ್ಕೆ ತೆಗೆದುಕೊಂಡಿದ್ದಾರೆಯೇ ಎಂದರೆ ಯಾರನ್ನೂ ತೆಗೆದುಕೊಂಡ ಹಾಗೆ ನಮಗೆ ಕಾಣುವುದಿಲ್ಲ. ಇವೊತ್ತು ನಾವು ನಮ್ಮ ದೇಶದಲ್ಲಿ ನೋಡುತ್ತಿದ್ದೇವೆ ಮದ್ರಾಸ್ ಮತ್ತು ಕೇರಳದಿಂದ ಅನೇಕ ಜನರು ನಮ್ಮ ದೇಶಕ್ಕೆ ಬಂದು ಕೆಲಸ ಮಾಡುತ್ತಿದ್ದಾರೆ. ನಮ್ಮ ಮೈಸೂರಿನ ಜನ, ಕರ್ನಾಟಕ ದಲ್ಲಿರುವ ಜನ ಕೆಲಸ ಇಲ್ಲದೆ ಸಾಯುತ್ತಿದ್ದಾರೆ. ಏತಕ್ಕೋಸ್ಕರ ಈ ರೀತಿ ಆಗುತ್ತಿದೆ ? ಇದಕ್ಕೆ ಮೂಲಭೂತವಾದ ಕಾರಣವೇನೆಂದರೆ ಅಧಿಕಾರ ಕೇಂದ್ರೀಕರಣವೆಂಬ ವಿಷ ಇದೆ. ಅದು ಇಡೀ ದೇಶವನ್ನೇ ಸಾಯುವ ಪರಿಸ್ಥಿತಿಗೆ ತರುತ್ತಿದೆ. ನಾನು ಎಚ್ಚರಿಕೆಯಿಂದ ಹೇಳುತ್ತೇನೆ. ಡೀಸೆಂಟ್ರಲೈಜೇಷನ್ ಮಾಡಬೇಕು. ಬ್ರಿಟಿಷರ ಕಾಲದಲ್ಲಿ ಹಾಕಿದಂತಹ ಬೇಸ್‌ಮೆಂಟನ್ನು ಬದಲಾಯಿಸಬೇಕು. ಈ ಆಡಳಿತ ಕಟ್ಟಡ ಬೀಳುವ ಸ್ಥಿತಿಗೆ ಬರುತ್ತದೆ. ನಮ್ಮವರು ಬಹಳ ಒಳ್ಳೆಯ ಜನ. ಆದರೂ ಕೂಡ ಇನ್ನು ಇದನ್ನು ತಡೆಯುವುದಕ್ಕೆ ಆಗುವುದಿಲ್ಲ. ಸ್ವಲ್ಪ ಕಾಲದಲ್ಲಿ ನಮ್ಮ ದೇಶದಲ್ಲಿ ರೆವಲ್ಯೂಷನ್ ಬರುತ್ತದೆ ಎಂದು ಹೇಳುತ್ತೇನೆ. ಇದಕ್ಕೆಲ್ಲಾ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್‌ಗಳು ಮೂಲ ಕಾರಣವಾಗಿದ್ದಾರೆ. ಇವತ್ತಿನ ದಿವಸ ಸರಕಾರಿ ಅಧಿಕಾರಿಗಳಿಗೆ ನಾವು ಲೆಜಿಸ್ಲೇಟರ್ಸ್ ಎಂದು ಹೇಳಿದರೆ ಅದಕ್ಕೆ ಅವರ ಗಮನವಿಲ್ಲ. ಅಧಿಕಾರಿಗಳು ನನಗೆ ಏನಾದರೂ ಅಂಥ ಉತ್ತರ ಕೊಟ್ಟರೆ ನನಗೆ ವಿಪರೀತ ಕೋಪ ಬಂದು ನಾನು ಅವರ ಮುಖಕ್ಕೆ ಹೊಡೆದುಬಿಡುತ್ತಿದ್ದೆನು. ಒಟ್ಟಿನಲ್ಲಿ ಹೇಳುವುದು ಏನೆಂದರೆ, ಈ ಅಧಿಕಾರಿಗಳಿಗೆ ಯಾರ ಭೀತಿಯೂ ಇಲ್ಲ. ನಾವು ಸೆಕ್ರೆಟೆರಿಯೆಟ್ಟಿಗೆ ಏನಾದರೂ ಕಾಗದ ಬರೆದರೆ ಅದಕ್ಕೆ ಉತ್ತರವೇ ಬರುವುದಿಲ್ಲ. ನಾನ್ ಗೆಜೆಟೆಡ್ ಆಫೀಸರ್ಸ್ ಬಗ್ಗೆ ಮುಖ್ಯಮಂತ್ರಿಗಳು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಒಂದು ಮಾತು ಹೇಳಿದರು. ಅವರ ಕಷ್ಟ ಸುಖದ ಬಗ್ಗೆ ಸಕಾಲದಲ್ಲಿ ಯೋಚನೆ ಮಾಡಿ ತೀರ್ಮಾನ ಮಾಡುತ್ತಿಲ್ಲ. ಇದರಿಂದ ಏನಾಗಿದೆ ಎಂದರೆ, ಅವರಲ್ಲಿ ಡಿಸ್‌ಕಂಟೆಂಟ್‌ಮೆಂಟ್, ಡಿಸ್ ಸ್ಯಾಟಿಸ್‌ಫ್ಯಾಕ್ಷನ್ ಬೆಳೆದಿದೆ. ನಾನ್ ಗೆಜೆಟೆಡ್ ಆಫೀಸರುಗಳು ಅಸಮಾಧಾನವಾಗಿದ್ದಾರೆ, ಅತೃಪ್ತರಾಗಿದ್ದಾರೆ. ಇದನ್ನು ಯಾರು ನೋಡಬೇಕು ? ಆಯಾಯ ಇಲಾಖೆಯ ಸೆಕ್ರೆಟರಿ ಮತ್ತು ಇಲಾಖಾ ಮುಖ್ಯಾಧಿಕಾರಿ ಅವರು ನೋಡಬೇಕು. ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿಗಳು ಆಗಿರುವವರು ಇದನ್ನು ನೋಡಬೇಕು. ಬ್ರಿಟಿಶರ ಕಾಲದಲ್ಲಿರುವ ಹಾಗೆ ಒಂದು ಅರ್ಜಿ ತಂದರೆ ಅದರ ಮೇಲೆ 'ಅಂಡರ್ ಕನ್ಸಿಡರೇಷನ್' ಎಂದು ಬರೆಯುತ್ತಾರೆ. "Under consideration, file may be put up" "ಯೋಚನೆಮಾಡೋಣ, ನೋಡೋಣ" ಎಂದು ಹೇಳುತ್ತಾರೆ. ಈ ಪದಗಳನ್ನು ಬಿಟ್ಟು ಬೇರೆ ಪದ ಉಪಯೋಗಿಸುವುದಿಲ್ಲ. ಆದುದರಿಂದ ಕೆಲಸ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇಲ್ಲದಿದ್ದರೆ ಜನರಿಗೆ ಬಹಳ ಅನನುಕೂಲವಾಗುತ್ತದೆ. ಇಂಥ ನಿಜವಾದ ಸಂಗತಿ ಹೇಳಿದರೆ ಏನಾದರೂ ಪ್ರಯೋಜನವಾಗುತ್ತದೇನು ? ನಿಜ ಹೇಳಿದರೆ ಅಪಚಾರವಾಗುತ್ತದೆ. ಸರಕಾರ ಅಂದರೆ ಒಂದು ಎಮ್ಮೆ ಇರುವ ರೀತಿಯಲ್ಲಿ ಇದೆ. ಮೊದಲನೇ ಏಟಿಗೆ ಎಲ್ಲಿಯೋ ಶಬ್ದವಾಯಿತು ಅನ್ನುತ್ತದೆ. ಎರಡನೇ ಏಟಿಗೆ ಶಬ್ದ ಹತ್ತಿರ ಕೇಳಿಸುತ್ತದೆ ಅನ್ನುತ್ತದೆ. ಮೂರನೇ ಏಟಿಗೆ ಕಿವಿಯ ಹತ್ತಿರ ಬಂತು ಅನ್ನುತ್ತದೆ. ನಾಲ್ಕನೇ ಏಟು ಬಿತ್ತು ಅಂದರೆ ಅದಕ್ಕೆ ಗೊತ್ತಾಗುತ್ತದೆ. ಮೊದಲನೇ ಏಟು ಅಂದರೆ, ಮೊದಲನೇ ಮಹಾ ಚುನಾವಣೆ. ಈ ರೀತಿ ನಾಲ್ಕು ಏಟುಗಳು ಈಗಾಗಲೇ ಬಿದ್ದಿವೆ. ಇನ್ನು ಐದನೇ ಏಟು ಬೀಳತಕ್ಕದ್ದು ಇದೆ. ಐದನೇ ಏಟು ಬಿತ್ತು ಅಂದರೆ ಇದಕ್ಕೆ ಬುದ್ಧಿ ಬರುತ್ತದೆ. ನಿಜವಾಗಿಯೂ ಚೀಫ್ ಮಿನಿಸ್ಟರ್ ಅವರು ಆರ್ಮಿ ಆಫ್ ಮಿನಿಸ್ಟರ್ಸ್ ಇಟ್ಟುಕೊಂಡಿದ್ದಾರೆ. ಇದು ರೆಪ್ರೆಜೆಂಟೇಟಿವ್ ಕ್ಯಾರೆಕ್ಟರ್ ಆಗಿದೆಯೇ ? ನಮ್ಮವರು ಒಬ್ಬ ಡೆಪ್ಯೂಟಿ ಮಿನಿಸ್ಟರ್ ಮಾತ್ರ ಇದ್ದಾರೆ. ಈ ಸಭೆಯಲ್ಲಿ ಇರುವ 25 ಜನ ಮುಸ್ಲಿಂ ಸದಸ್ಯರಿಗೆ ಒಬ್ಬ ಡೆಪ್ಯೂಟಿ ಮಿನಿಸ್ಟರ್ ಅಬ್ದುಲ್ ಗಫಾರ್ ಅವರು ಇದ್ದರೆ ಸರಿಯಾದ ರೆಪ್ರೆಜೆಂಟೇಷನ್ ಆಯಿತೇ ? ರೆಪ್ರೆಜೆಂಟೇಟಿವ್ ಕ್ಯಾರೆಕ್ಟರ್ ಬರಿ ಕಾಗದದ ಮೇಲೆ ಉಳಿದಿದೆ. ಎಲ್ಲರಿಗೂ ನ್ಯಾಯ ದೊರಕಿಸಿ ಕೊಡುತ್ತೇವೆ ಎಂದು ಈ ಸಭೆಯಲ್ಲಿ

ಮೇಲೆ ತಕ್ಕಡಿ ಚಿಕ್ಕೆ ಇಟ್ಟುಕೊಂಡಿದ್ದೀರಿ. ಇದು ನ್ಯಾಯವೇ, ಇದು ಧರ್ಮವೇ ? ಒಂದೊಂದು ಪರಡಿಯಲ್ಲಿ ನನ್ನನ್ನು ಮತ್ತು ಅಬ್ದುಲ್ ಗಫಾರ್ ಅವರನ್ನು ಇಟ್ಟು ತೂಕ ಮಾಡಿದರೆ ನನ್ನ ತೂಕ ಜಾಸ್ತಿಯಾಗುತ್ತದೆ. ಸ್ಟೇಟ್ ಕಮಿಟಿಗಳಲ್ಲಿ ಒಬ್ಬ ಲೆಜಿಸ್ಲೇಟರ್ ಇಲ್ಲದೆ ಕಮಿಟಿ ಆಯಿತೇ ? ಹಾಜ್ ಕಮಿಟಿ ಮತ್ತು ಸ್ಟೇಟ್ ವಾಕ್‌ಫ್ ಬೋರ್ಡಿನಲ್ಲಿ ಒಬ್ಬ ಲೆಜಿಸ್ಲೇಟರ್ ಇಲ್ಲದೆ ಅದು ಕಮಿಟಿ ಹೇಗೆ ಆಗುತ್ತದೆ ?

ಇನ್ನು ಮುಜರಾಯಿ ಇಲಾಖೆ ಬಗ್ಗೆ ಹೇಳುವುದಾದರೆ, ಬೆಂಗಳೂರು ಸಿಟಿಯಲ್ಲಿ ಮುಸ್ಲಿಮರ ಹತ್ತಿಪ್ಪತ್ತು ಕೋಟಿ ರೂಪಾಯಿಗಳ ಆಸ್ತಿ ಇದೆ. ತಿಂಗಳಿಗೆ ಎರಡು ಸಾವಿರ ರೂಪಾಯಿ ಬಾಡಿಗೆ ಬರುವ ಆಸ್ತಿ ಇರತಕ್ಕ ಒಂದು ದರ್ಗಾ ಇದೆ. ಇದನ್ನು ಎರಡು ನೂರು ರೂಪಾಯಿಗಳಿಗೆ ಮುಜರಾಯಿ ಇಲಾಖೆಯುವರು ಕೊಟ್ಟು ಬಿಟ್ಟಿದ್ದಾರೆ. ಈ ದುಡ್ಡು ಬೇರೆಯವರ ಜೇಬಿಗೆ ಹೋಗುತ್ತಿದೆ. ಈ ರೀತಿ ಅನ್ಯಾಯ ಮಾಡಿದರೆ ಹೇಗೆ ? ಇದು ಬಹಳ ವಿಷಾದಕರ ವಿಷಯ.

ಚೀಫ್ ಮಿನಿಸ್ಟರ್ ಸಾಹೇಬರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್, ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆಗಳನ್ನು ಇಟ್ಟುಕೊಂಡಿದ್ದಾರೆ. ಈ ಮೂರರಲ್ಲಿ ಒಂದನ್ನು ಇಟ್ಟುಕೊಳ್ಳಲಿ. ಎಲ್ಲವನ್ನೂ ಇಟ್ಟುಕೊಂಡರೆ ಅವರಿಗೆ ಭಾರವಾಗುತ್ತದೆ. ಆದುದರಿಂದ ಪೋರ್ಟ್‌ಫೋಲಿಯೋ ಬದಲಾವಣೆ ಮಾಡಿಕೊಳ್ಳಿ ಎಂದು ಹೇಳುತ್ತೇನೆ.

ಇನ್ನು ಹೋಂ ಮತ್ತು ಲೇಬರ್ ಎರಡೂ ಇಲಾಖೆಗಳನ್ನು ಶ್ರೀ ಎಂ. ವಿ. ರಾಮರಾವ್ ಅವರು ಇಟ್ಟುಕೊಂಡಿದ್ದಾರೆ. ಒಬ್ಬರ ಅಧಿಕಾರಕ್ಕೆ ಈ ಎರಡು ಇಲಾಖೆಗಳು ಒಳಪಟ್ಟಿವೆ. ಇದರಿಂದ ತೊಂದರೆಯಾಗಿದೆ. ನನ್ನ ಮೇಲೆ ಕೂಡ ಎಂಟು ಒಂಭತ್ತು ಕೇಸುಗಳಿವೆ. ಕೇಸು ಹಾಕುವುದರಲ್ಲಿ ಕೈವಾಡ ನಡೆಯುತ್ತಿದೆ. ಮಹಾ ಮಂತ್ರಿಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರು ಕಾರಣರು ಎಂದು ಹೇಳುತ್ತೇನೆ. ಡೆಪ್ಯುಟಿ ಸೂಪರಿಂಟೆಂಡ್ ಆಫ್ ಪೋಲೀಸ್ ಅವರಿಗೆ ಮತ್ತು ಇನ್‌ಸ್ಪೆಕ್ಟರ್ ಅವರಿಗೆ ಅಜೀಜ್ ಸೇಠ್ ಬಗ್ಗೆ ಹೀಗೆ ಮಾಡಿ ಹಾಗೆ ಮಾಡಿ ಕೇಸು ಹಾಕಿ ಎಂದು ಹೇಳುತ್ತಾರೆ. ಇಂಥ ಮಂತ್ರಿ ಇದ್ದರೆ ಹೇಗೆ ? ಇದು ಹೇಗೆ ನ್ಯಾಯವಾಗುತ್ತದೆ ? ಇದರಲ್ಲಿ ಸತ್ಯ ತಡೆ ಹಿಡಿಯುಬಹುದೇ ಸ್ವಾಮಿ ? ಇದು ಪ್ರಜಾಪ್ರಭುತ್ವದಕಾಲ. ಪ್ರಜಾಪ್ರಭುತ್ವದಲ್ಲಿ ಮೈಸೂರು ಮುನಿಸಿಪಲ್ ಕೌನ್ಸಿಲ್ಲಿನ ಸದಸ್ಯರಾದ ಖಲೀಲ್ ಅವರಿಗೆ ಹೇಗೆ ತೊಂದರೆ ಕೊಟ್ಟಿದ್ದಾರೆ ಗೊತ್ತಿದೆಯೇ ? ಇವರಿಗೆ ಕಾನೂನು ಇಲ್ಲವೆ ? ಅವರು ಮೊದಲು ಕಾಂಗ್ರೆಸ್ಸಿನಲ್ಲಿದ್ದವರು. ಈಗ ಮೈಸೂರು ಮುನಿಸಿಪಲ್ ಕೌನ್ಸಿಲರ್ ಆಗಿದ್ದಾರೆ. ಅವರು ಮದ್ದೂರಿನ ಒಂದು ಅಸೋಸಿಯೇಷನ್ನಿನ ಸೆಕ್ರಟರಿಯಾಗಿ ಕೆಲಸ ಮಾಡಿದ್ದಾರೆ. ಅವರ ಮೇಲೆ ಆರು ಕೇಸುಗಳಿವೆ. ಇದಕ್ಕೆ ಕಾರಣ ಏನು ? ಒಂದು ಕೇಸಿನಲ್ಲಿ ಇವರು ಪರಾರಿ ಆಗಿದ್ದಾರೆಂದು ಮಾಜಿಸ್ಟ್ರೇಟ್ ಅವರಿಗೆ ಹೇಳಿ ಕೋರ್ಟಿನಿಂದ ವಾರಂಟ್ ತಂದು ಮುನಿಸಿಪಲ್ ಕೌನ್ಸಿಲರ್ ಆಗಿರುವವರನ್ನು ಅರೆಸ್ಟ್ ಮಾಡಿ ಮೈಸೂರು ಬೀಡಿ ಮಜ್‌ದೂರು ಸಂಘದ ಅಧ್ಯಕ್ಷರನ್ನು ಲಾಕ್‌ಪ್ಪಿನಲ್ಲಿಟ್ಟು ಮತ್ತೊಬ್ಬ ಖೈದಿಯೊಡನೆ ಹ್ಯಾಂಡ್ ಕಫ್ ಹಾಕಿ ಪೆರೇಡ್ ಮಾಡಲಾಯಿತು ? ಇದು ಪ್ರಜಾಪ್ರಭುತ್ವವೇ ?**** ಇದೆಂಥ ಡೆಮೊಕ್ರಸಿ ? ಗಾಂಧಿ ಮತ್ತು ನೆಹರು ಹೆಸರಿನಲ್ಲಿ ನೀವು ಜೀವನ ನಡೆಸುತ್ತೀರಿ. ಬ್ರಿಟಿಷ್ ಸರಕಾರದಲ್ಲಿ ಕೂಡ ಇಷ್ಟು ಅವಮರ್ಯಾದೆಯಾಗಿಲ್ಲ. ಇಂದು ನಮ್ಮ ಜನರಿಂದ ನಮ್ಮ ದೇಶದಲ್ಲಿ ನಮಗೆ ಅವಮರ್ಯಾದೆ ಮಾಡಲಾಗುತ್ತಿದೆ. ಒಬ್ಬ ಕೇಡಿ ಜೊತೆಗೆ ಹ್ಯಾಂಡ್ ಕಫ್ ಹಾಕಿ ಅವಮರ್ಯಾದೆ ಮಾಡುವುದೇ ? ಪುನಃ ಕೋರ್ಟಿಗೆ ಕಳಿಸುವುದೇ ? ಇದು ಕಾಂಗ್ರೆಸ್ಸಿನವರಿಗೆ ಬೇಕು ಎಂದು ಅಭಿಪ್ರಾಯವೆ ? ಸರಕಾರ ನಡೆಸಬೇಕು ಅಂದರೆ ಜನರಿಗೆ ಆಗುವ ಅನ್ಯಾಯ ನಿಲ್ಲಿಸಬೇಕು, ನ್ಯಾಯ ದೊರಕಿಸಿಕೊಡಬೇಕು. ಇದು ಒಂದು ಪಕ್ಷಕ್ಕೆ ಸೇರಿದ ವಿಷಯವಲ್ಲ. ಈ ರೀತಿ ನೀವು ಮಾಡುವುದರಿಂದ ಏನು ಆಗಲಿಕ್ಕಿಲ್ಲ ಎಂಬುದನ್ನು ಯೋಚನೆ ಮಾಡಿ. ಅಧಿಕಾರಿಗಳು ಡಿಸ್‌ಕಂಟೆಂಟ್ ಆಗಿದ್ದಾರೆ. ಇದು ಹೇಗೆ ? ನನಗೆ ಅನಿಸುತ್ತದೆ, ಇದು ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳ ರಾಜಕೀಯವಾಗುತ್ತದೆ. ಒಂದು ದಿವಸ ರಾಜ್ಯಕ್ರಾಂತಿಯಾಗಿ ಐ. ಪಿ. ಎಸ್. ಮತ್ತು ಐ. ಎ. ಎಸ್. ಅಧಿಕಾರಿಗಳು ಲೆಜಿಸ್ಲೇಟರ್ಸ್, ಮಿನಿಸ್ಟರ್ಸ್ ಎಲ್ಲರನ್ನೂ ಅರೆಸ್ಟ್ ಮಾಡಿ ಇವರು ರಾಜ್ಯದಾಡಳಿತ ನಡೆಸುತ್ತಾರೆ ಎಂದು ನನಗೆ ತೋರುತ್ತದೆ. ಇದು ಬಹಳ ಅಪಾಯ. ಏನು ಮಾತನಾಡುವುದಕ್ಕೂ ಇಂದು ಕಷ್ಟ ಇದೆ. ಅವರಿಗೆ do not interfere ಎಂದು ಹೇಳುತ್ತೀರಾ ? ಇಂಟರ್‌ಫಿಯರ್ ಮಾಡುವುದಿಲ್ಲ ಎಂದು ಒಪ್ಪಿಕೊಳ್ಳುತ್ತೀರಾ ? ನೀವು ಮಂತ್ರಿಗಳು ಇಂಟರ್‌ಫಿಯರ್ ಮಾಡಬಹುದೇ ? ಮೂರು ಮೂರು ತಿಂಗಳಿಗೆ ಟ್ರಾನ್ಸ್‌ಫರ್ ಮಾಡಬಹುದೋ ?

12 NOON

ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರನಲ್ಲಿ ಯಾವಯಾವ ಕಮ್ಯೂನಿಟಿಯವರು ಡೆಪ್ಯುಟಿ ಕಮೀಷನರಾಗಿ ಎಷ್ಟು ಜನ ಇಂಡಿಪೆಂಡೆಂಟ್ ಚಾರ್ಜ್‌ನಲ್ಲಿದ್ದಾರೆ ಎಂದು ಹೇಳಿ. ಎಲ್ಲರನ್ನೂ ತೆಗೆದು ಬಿಡಿ, ಯಾವುದಾದರೂ

**** Expunged as ordered by the Chair.

(ಶ್ರೀ ಅಜೀಜ್ ಸೇಟ್)

ಒಂದು ಕಮ್ಯೂನಿಟಿ ಇಟ್ಟುಕೊಳ್ಳಿ. ಯಾವುದೋ ಪ್ಯೂನಿಟಿವ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದಾರೆಯೇ ಎಂದು ಪ್ರಶ್ನೆ ಕೇಳಿದಾಗ ಪ್ಯೂನಿಟಿವ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿಲ್ಲ, ಅಲ್ಲಿ ಪೋಲೀಸ್ ಇಟ್ಟಿದ್ದೇವೆ ಅವರ ಖರ್ಚನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು. ಈ ದೇಶದಲ್ಲಿ ಕಮ್ಯೂನಲ್ ರಯಟ್ಸ್ ಆದಾಗ ಪ್ಯೂನಿಟಿವ್ ಟ್ಯಾಕ್ಸ್ ಹಾಕಿದ್ದೀರಾ ಎಂದರೆ ಇಲ್ಲ. ಹಾಕುವುದಕ್ಕೆ ನಿಮಗೆ ಧೈರ್ಯವಿಲ್ಲ; ನಿಮಗೆ ಗಂಡಸುತನವಿಲ್ಲ. ನೀವು ಏನು ಮಾಡುತ್ತೀರಿ. ನಿಮಗೆ ಯಾರು ಬೇಕೋ ಅವರಿಗೆ ಅನುಕೂಲವಾಗುವಂತೆ ಮಾಡುತ್ತೀರಿ. ನಿಮ್ಮ ಪಕ್ಷಕ್ಕೆ ಬಂದುಬಿಡಬೇಕು. ಎಲ್ಲರೂ ಒಂದು ದಿನ ಸಾಯಬೇಕಾಗಿದೆ. ಹುಟ್ಟುವಾಗ ಏನೂ ತರುವುದಿಲ್ಲ. ಸತ್ತುಹೋದಾಗ ಏನೂ ತೆಗೆದುಕೊಂಡು ಹೋಗುವುದಿಲ್ಲ. ಕರಪ್‌ಷನ್ ಕಡಿಮೆ ಮಾಡಲು ವಿಜಿಲೆನ್ಸ್ ಕಮಿಷನ್ ಮಾಡಿದಿರಿ.*** ಆದರೆ ಏನಾಗಿದೆ? ಒಬ್ಬ ಎಕ್ಸೈಜ್ ಇನ್‌ಸ್ಪೆಕ್ಟರು ಸತ್ತುಹೋದ. ಶ್ರೀ ರಾಮರಾಯರ ಕ್ಷೇತ್ರವಾದ ತುಮಕೂರು ಜಿಲ್ಲೆಯಲ್ಲಿ ಸತ್ತುಹೋದ. ಸತ್ತು ಎಂಟು ವರ್ಷವಾಯಿತು. ಸ್ಪೆಷಲ್ ಆಫೀಸರ್ ಫಾರ್ ಪೆನ್‌ಷನ್, ಸೆಕ್ರೆಟರಿ, ಫೈನಾನ್ಸ್ ಡಿಪಾರ್ಟ್‌ಮೆಂಟ್, ಡೆಪ್ಯುಟಿ ಕಮಿಷನರ್ ಮತ್ತು ತಹಸೀಲ್ದಾರ್ ಎಲ್ಲರಿಗೂ ಬರೆದಿದ್ದಾರೆ. ಆತನ ಹೆಂಡತಿ ಪೆನ್‌ಷನ್‌ಗೆ ಅರ್ಜಿ ಹಾಕಿದ್ದಾಳೆ. ಇದರ ಬಗ್ಗೆ ಕೇಳಿದರೆ ಬರಾವರ್ದ್ ಕಳಿಸಿಕೊಡಿ ಎಂದು ತಹಸೀಲ್ದಾರರಿಗೆ ಬರೆದಿದ್ದೇವೆ, ಅವರಿಂದ ಇನ್ನೂ ಬಂದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಇಲಾಖೆಯಲ್ಲಿ ಕೆಲಸ ಮಾಡಿ ಸತ್ತುಹೋದವನ ಹೆಂಡತಿ ಮಕ್ಕಳು ಹೊಟ್ಟೆ ಬಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ಸರ್ಕಾರದಲ್ಲಿ ಆಫೀಸರುಗಳ ಮೇಲೆ ಆಫೀಸರುಗಳನ್ನು ನೇಮಕ ಮಾಡುತ್ತಿದ್ದೀರಿ ಇದು ಸರಿಯಲ್ಲ. ನಿಮ್ಮ ಅಧಿಕಾರಿಗಳನ್ನು, 'ಎ' ಕ್ಲಾಸ್ ಅಧಿಕಾರಿಗಳನ್ನು ಕಡಮೆ ಮಾಡಿ ಸರಿಯಾದ ಕೆಲಸ ತೆಗೆದುಕೊಂಡು ಚೆನ್ನಾಗಿ ಆಡಳಿತ ಮಾಡಿ. ಬದನೆಕಾಯಿ ಮೇಲೆ ತೊಟ್ಟು ಇರುವ ಹಾಗೆ ನೀವು ಇಲ್ಲಿದ್ದೀರಿ. ನಿಮ್ಮಲ್ಲಿ ಛಾತಿ ಇಲ್ಲ. ನೀವು ಮಾಡುವುದನ್ನು ಅವರು ಒಪ್ಪಿಕೊಳ್ಳುವುದಿಲ್ಲ; ಅವರು ಮಾಡುವುದನ್ನು ನೀವು ಒಪ್ಪಿಕೊಳ್ಳುವುದಿಲ್ಲ. ನಿಮ್ಮಲ್ಲೇ ಅಲ್ಲಕಲ್ಲೋಲವಾಗುತ್ತಿದೆ.

ವ್ಯವಸಾಯವನ್ನು ತೆಗೆದುಕೊಳ್ಳಿ, ಗ್ರ್ಯಾಂಟ್ ಆಫ್ ಲ್ಯಾಂಡ್ ತೆಗೆದುಕೊಳ್ಳಿ, ಎಲ್ಲದರಲ್ಲಿಯೂ ಒಂದು ನೀತಿ ಇಲ್ಲ. ರೆವಿನ್ಯೂ ಮಿನಿಸ್ಟರ್ ಸಾಹೇಬರು ಒಂದೊಂದು ಭೂಮಿಯನ್ನು ಹತ್ತು ಹತ್ತು ಜನಗಳಿಗೆ ಗ್ರ್ಯಾಂಟ್ ಮಾಡಿದ್ದಾರೆ. ಜತ್ತಿ ಸಾಹೇಬರು ಹೇಳಿದರು, ಡಿಕ್ಲರೇಷನ್ ಮಾಡದೆ ಇರುವವರಿಂದ ಪ್ರೊಕ್ಯೂರ್‌ಮೆಂಟ್ ಮಾಡಿದ್ದರೆ ಅಪೀಲ್ ಮಾಡಬಹುದು ಎಂದು ಹೇಳಿದರು. ಅಪೀಲ್ ಮಾಡಬೇಕಾದರೆ ಸುಮ್ಮನೆ ಆಗುತ್ತದೆಯೇ? ಮೈಸೂರಿನಿಂದ ಬೆಂಗಳೂರಿಗೆ ಬರಬೇಕು, ಲಾಯರಿಗೆ ಫೀಸು ಕೊಡಬೇಕು, ನೀವು ಮಾಡಿದ ಆಕ್ಟುಗಳನ್ನೆಲ್ಲ ಲಾಯರುಗಳಿಗೆ ಅನುಕೂಲವಾಗುವ ಹಾಗೆ ಮಾಡುತ್ತೀರಿ. ಎಲ್ಲ ಉಲ್ಟಾಪಲ್ಟಾ ಮಾಡುತ್ತೀರಿ. ಇದರಿಂದ ನಿಮಗೆ ಏನಾಯಿತು, ಏನೂ ಆಗಲಿಲ್ಲ. ನಾವು ಹಾಳಾಗುತ್ತೇವೆ. ನ್ಯಾಯವಿಲ್ಲ, ಧರ್ಮವಿಲ್ಲ, ಸತ್ಯವಿಲ್ಲ, ಏನೂ ಇಲ್ಲ. ಇವು ನಿಮ್ಮಲ್ಲಿ ಇವೆ ಎಂದರೆ ಸರಿಯಾಗಿ ಕೆಲಸ ಮಾಡಿ. ಕೈಗಾರಿಕೆ ಇಲಾಖೆಯ ಮುಖ್ಯಸ್ಥರು, ಅಗ್ರಿಕಲ್ಚರಲ್ ಇಲಾಖೆಯ ಮುಖ್ಯಸ್ಥರು ಅಥವಾ ಬೇರೆಯವರು ಯಾರೇ ಇರಲಿ ಅವರು ತಪ್ಪು ಮಾಡಿದರೆ ಅವರನ್ನು ಸ್ಯಾಕ್ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನೀವು ಹಾಗೆ ಮಾಡುವುದಿಲ್ಲ. ಫಸ್ಟ್ ಡಿವಿಜನ್ ಕ್ಲಾರ್ಕ್, ಸೆಕೆಂಡ್ ಡಿವಿಜನ್ ಕ್ಲರ್ಕ್, ಪ್ಯೂನ್ ಇಂಥವರನ್ನು ಮಾತ್ರ ಸ್ಯಾಕ್ ಮಾಡುತ್ತೀರಿ. ಅವರೆ ಅಧಿಕಾರಿಗಳು ನಿಮ್ಮ ಜೊತೆಯಲ್ಲೇ ಇರುತ್ತಾರೆ. ಅವರನ್ನು ಹಿಡಿಯುವ ಗಂಡಸುತನ ನಿಮ್ಮಲ್ಲವೆಯೇ? ನೀವು ರಾಜ, ಅವರು ಮಂತ್ರಿ, ನಾವು ಬಾಜಾಬಜಂತ್ರಿ ಬಾರಿಸುವುದಕ್ಕೆ ಇದೇವೇನ್ರೀ? ಹೇಳುತ್ತ ಹೋದರೆ ದೊಡ್ಡ ಚರಿತ್ರೆ ಆಗುತ್ತದೆ. ಕಾವೇರಿ ನದಿಯಲ್ಲಿರುವ ನೀರನ್ನೆಲ್ಲಾ ಮಸಿ ಮಾಡಿ ಬರೆದರೂ ನಿಮ್ಮ ಹರಿಕಥೆ ಮುಗಿಯುವುದಿಲ್ಲ. ಎಷ್ಟು ವರ್ಷ ಹೇಳಿದರೂ ಏನೂ ಆಗುವುದಿಲ್ಲ. ನಾನು ಸುಲಭವಾಗಿ ಹೇಳಿ ಮುಗಿಸುತ್ತೇನೆ.

ಕೆಲವರು ಮಂತ್ರಿಗಳಲ್ಲಿ ಒಂದು ಭಾವನೆ ಬಂದಿದೆ. ನಾನು ಬಡವ, ಇಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. ತಮ್ಮ ತಲೆ ಮೇಲೆ ತಕ್ಕಡಿ ಇದೆ. ಆದ್ದರಿಂದ ನ್ಯಾಯವಾಗಿ ನಡೆಯಬೇಕು. ಕೆಲವು ಮಂತ್ರಿಗಳು ಏನು ಮಾಡುತ್ತಾರೆಂದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್, ಹೆಡ್ ಆಫ್ ದಿ ಡಿಸ್ಟ್ರಿಕ್ಟ್ ಅವರಿಗೆ ಬರೆದು ಅಜೀಜ್ ಸೇಟ್ ಬಂದರೆ ಏನೂ ಕೆಲಸ ಮಾಡಿಕೊಡಬೇಡಿ ಎಂದು ಕಾನ್‌ಫಿಡೆನ್ಷಿಯಲ್ ಲೆಟರ್ ಬರೆಯುತ್ತಾರೆ. ಇದು ಯಾವ ಧರ್ಮ, ಯಾವ ನ್ಯಾಯ? ನೀವು

*** Expunged as ordered by the Chair

ಹೇಳಿದ ತಕ್ಷಣ ಆ ರೀತಿ ಮಾಡಿದರೆ ಅವರು ಎಂಥ ಮುಠ್ಠಾಳರಾಗುತ್ತಾರೆ? ಕೋರ್ಟಿಗೆ ಹೋದರೆ ಏನು ಮಾಡುತ್ತಾರೆ? ಏನೂ ಮಾಡುವುದಕ್ಕಾಗುವುದಿಲ್ಲ. ಅವರವರ ಜವಾಬ್ದಾರಿ ಅವರವರು ನೋಡಿಕೊಳ್ಳುತ್ತಾರೆ. ನೀವು ಇಂಟರ್‌ಫಿಯರ್ ಜಾಸ್ತಿ ಮಾಡುತ್ತಿದ್ದೀರಿ. ನೀವು ಇಂಟರ್‌ಫಿಯರ್ ಮಾಡುವುದು ಸರಿಯಲ್ಲ. ಅಧಿಕಾರಿಗಳು ಸತ್ಯದಿಂದ, ಧರ್ಮದಿಂದ, ನ್ಯಾಯದಿಂದ ಕೆಲಸ ಮಾಡಬೇಕು. ಯಾರಾದರೂ ಲೋಪ ಮಾಡಿದರೆ ಅವನಷ್ಟು ದೇಶ ದ್ರೋಹಿ ಯಾರೂ ಇಲ್ಲ ಎಂದು ಹೇಳುತ್ತೇನೆ.

1947ನೆ ಇಸವಿಯಲ್ಲಿ ನಾನು ನೋಡಿರುವ ಹಾಗೆ ಕೆಲವು ಮಂತ್ರಿಗಳಿಗೆ ಮತ್ತು ಕಾಂಗ್ರೆಸ್ ಮೆಂಬರುಗಳಿಗೆ ಕುಳಿತುಕೊಳ್ಳುವುದಕ್ಕೆ ಸೈಕಲ್ ಗತಿ ಇರಲಿಲ್ಲ. ಮೋಟಾರ್ ಕಾರು ನೋಡಿರಲಿಲ್ಲ. ಬೋಲ್ಟ್, ನಟ್ ಅಂದರೆ ಯಾವುದು ಎಂದು ಗೊತ್ತಿರಲಿಲ್ಲ. ಅಂಥವರು ಈಗ ಕಂಪನಿಗಳಲ್ಲಿ 20 ಲಕ್ಷ, 30 ಲಕ್ಷ, 50 ಲಕ್ಷ ರೂಪಾಯಿಗಳ ಷೇರು ಹೋಲ್ಡರುಗಳಾಗಿದ್ದಾರೆ. ಬೊಂಬಾಯಿನಲ್ಲಿ ಮನೆಗಳಿವೆ, ಮದ್ರಾಸಿನಲ್ಲಿ ಮನೆಗಳಿವೆ, ಬೆಂಗಳೂರಿನಲ್ಲಿ ಮನೆಗಳಿವೆ. ಇವೇನು ಅವರಮ್ಮನ ಮನೆಯಿಂದ ಬಂತೇ, ಅವರಪ್ಪನ ಮನೆಯಿಂದ ಬಂತೇ, ಅವರ ಹೆಂಡತಿ ಮನೆಯಿಂದ ಬಂತೇ ಇದನ್ನೆಲ್ಲ ಸ್ಕ್ರೀನ್ ಮಾಡಿ ಪತ್ತೆ ಹಚ್ಚಬೇಕು.

ಖೋಟಾ ನೋಟು ತಯಾರಿಕೆ ಹೆಚ್ಚಾಗುತ್ತಿದೆ. ಇವರ ಕ್ಯಾಬಿನೆಟ್‌ನಲ್ಲಿರುವವರು ಇದಕ್ಕೆ ಸಹಾಯ ಮಾಡಿದ್ದಾರೆ. ಅವರನ್ನು ಧೈರ್ಯದಿಂದ ತೆಗೆದು ಹಾಕಬೇಕು. ಅವರು ಗಾಂಧಿ ಭಕ್ತರು. ಅವರ ಮೇಲೆ ಬಹಳ ವಿಶ್ವಾಸವಿದೆ. ಇವರ ಮೇಲೆ ಅವರಿಗೆ ಅಪಾರವಾದ ಭಕ್ತಿ. ಮನುಷ್ಯ ಮಾತ್ರ ಚಿನ್ನ, ಕಿವಿ ಹಿತ್ತಾಳೆಯದು. ನಿಜಲಿಂಗಪ್ಪನವರಲ್ಲಿರುವ ವೀಕ್‌ನೆಸ್ ಇದು. ಅವರ ಕಿವಿ ಹಿತ್ತಾಳೆ ಕಿವಿ. ಅವರು ಬಹಳ ಒಳ್ಳೆಯವರು. ಯಾರು ಹೇಳಿದರೂ ಕೇಳುತ್ತಾರೆ. ಖೋಟಾ ನೋಟು ತಯಾರಿಕೆಗೆ ಸಹಾಯ ಮಾಡಿದ ಯಾವ ಮಂತ್ರಿಗಳಿದ್ದಾರೆ ಅವರನ್ನು ತೆಗೆಯಬೇಕು. ಹೋಮ್ ಮಿನಿಸ್ಟ್ರಿಯಿಂದ ಒಂದು ಕಾಗದ ಬಂದಿದೆ. ನಿಮ್ಮವರು ಇಂಥವರು ಖೋಟಾ ನೋಟು ತಯಾರಿಕೆಯಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು. ಅವರನ್ನು ಮೊದಲು ಧೈರ್ಯದಿಂದ ತೆಗೆಯಬೇಕು, without favour or fear.

ಅರಿಸ್ಟೋಕ್ರಟಿಕ್ ಆಫೀಸರ್ಸ್ ಯಾರಿದ್ದಾರೆ ಅವರನ್ನು 20-25 ವರ್ಷ ಸರ್ವಿಸ್ ಆಗಿರುವವರನ್ನು ಕಂಪಲ್ಸರಿಯಾಗಿ ರಿಟೈರ್ ಮಾಡಬೇಕು ಅಥವಾ ಅವರನ್ನು ಕೆಲಸದಿಂದ ವಜಾ ಮಾಡಬೇಕು; ಅವರನ್ನು ಮನೆಗೆ ಕಳಿಸಬೇಕು. ಇಷ್ಟೊಂದು ಮಾಡಿದರೆ ಅವರಿಗೆ ತಾವು ಹೇಗೆ ಇರಬೇಕೆಂದು ಅರ್ಥವಾಗುತ್ತದೆ. ಒಂದು ಸರ್ಕ್ಯುಲರ್ ಕಳಿಸುವುದರಿಂದ ಏನೂ ಅರ್ಥವಾಗುವುದಿಲ್ಲ. ಲೆಜಿಸ್ಲೇಟರ್ ಬಂದರೆ ಎದ್ದು ನಿಂತುಕೊಂಡು ಪರಾಕ್ ಹೇಳುವುದು ನಮಗೆ ಬೇಡ. ಆದರೆ ನಾವು ಯಾರಾದರೂ ಹೋದಾಗ ವಿನಯದಿಂದ ನಾವು ಹೇಳುವುದನ್ನು ಕೇಳಬೇಕು.

ನಾನು ಹಿಂದೆ ಒಂದು ಸಲ ಮುಖ್ಯ ಮಂತ್ರಿಗಳನ್ನು ನನಗೆ ಐದು ಟನ್ ಸ್ಟೀಲ್ ಕೋಟಾ ಕೊಡಿ ಸಾಕು ಎಂದು ಕೇಳಿದೆ. ಕೊಟ್ಟರೆ ಏನು ಮಾಡುತ್ತೀರಿ ಎಂದು ಕೇಳಿದರು. ಐದು ಟನ್ ತೆಗೆದುಕೊಂಡು ಏನೂ ಮಾಡುವುದಲ್ಲ, ಒಂದು ಕೈಗಾರಿಕೆ, ಒಂದು ಕಾರ್ಖಾನೆ ಏನೂ ಮಾಡುವುದಿಲ್ಲ. ಏನೋ ನೀವು ಮನಸ್ಸು ಮಾಡಿ ಕೊಟ್ಟರೆ ನಾನು ಬದುಕಿಕೊಳ್ಳುತ್ತೇನೆ. ಒಂದು ಟನ್ನಿಗೆ ಐದು ಸಾವಿರ ರೂಪಾಯಿ ಸಿಕ್ಕುತ್ತದೆ. ಐದು ಟನ್ ಮಾರಿದರೆ 25 ಸಾವಿರ ರೂಪಾಯಿ ಆಗುತ್ತದೆ. ವರ್ಷಕ್ಕೆ ನಾಲ್ಕು ಕೋಟಾ ಬರುತ್ತದೆ ಎಂದರೆ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಆಯಿತು. ಮೊದಲನೆ ವರ್ಷ ಸಾಲ ತೀರಿಸಿಕೊಳ್ಳುತ್ತೇನೆ, ಎರಡನೆ ವರ್ಷ ಮನೆ ಮಠ ಮಾಡಿಕೊಳ್ಳುತ್ತೇನೆ, ಮೂರನೆ ವರ್ಷ ಬಂಡವಾಳ ಮಾಡಿಕೊಳ್ಳುತ್ತೇನೆ, ಇಷ್ಟು ಮಾಡಿ ಎಂದು ಹೇಳಿದಾಗ 'you have become very mischievous' ಎಂದು ಹೇಳಿದರು. ಈ ರೀತಿ ನಮ್ಮ ರಾಜ್ಯದಲ್ಲಿ ಆಡಳಿತ ನಡೆಯುತ್ತಿದೆ. ಎಚ್ಚರಿಕೆಯಿಂದ ಇರಿ. ನಿಮ್ಮ ಹಿಂಬಾಲಕರು ಇದ್ದಾರೆ ನೋಡಿ, ತಬಲ ಬಾರಿಸುವವರು ಎದ್ದೆದ್ದು ಮಧ್ಯದಲ್ಲಿ ಮಾತನಾಡುವವರು ಅವರ ವಿಚಾರದಲ್ಲಿ ಎಚ್ಚರಿಕೆಯಿಂದ ಇರಿ. ನಾನು ಚಿಕ್ಕಟ್ಟಾಗಿ ಹೇಳುತ್ತೇನೆ. ನಿಜಲಿಂಗಪ್ಪನವರಿಂದ ನಿಜವಾಗಿಯೂ ದೇಶಕ್ಕೆ ಒಳ್ಳೆಯದಾಗಬೇಕು. ಅವರ ಮೇಲೆ ಯಾವ ರೀತಿಯ ಟೀಕೆಯೂ ಬರಬಾರದು ಎಂದರೆ ಅವರು ಕ್ಯಾಬಿನೆಟಿನಲ್ಲಿ ಮೊದಲು ಸ್ಕ್ರೀನ್ ಮಾಡಿ, ಖೋಟಾ ನೋಟು ತಯಾರಿಕೆಯಲ್ಲಿ ಸಹಾಯ ಮಾಡಿದವರನ್ನು ಕೂಡಲೇ ತೆಗೆಯಲಿ ಎಂದು ಹೇಳಿ, ಇಷ್ಟು ಅವಕಾಶ ಕೊಟ್ಟದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೇ, ಇಂದು ಮುಖ್ಯ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗೆ ನಾನು ಅನುಮೋದನೆ ಕೊಡುತ್ತಾ ಕೆಲವು ವಿಷಯಗಳನ್ನು ಹೇಳಲು ಇಲ್ಲಿ ನಿಂತಿದ್ದೇನೆ. ಮೊದಲನೆಯದಾಗಿ ವಕ್ಕಲುತನದ ಖಾತೆ ವಿಷಯವಾಗಿ ಈ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದು ನಮ್ಮ ದೇಶದ ಒಂದು ಭಾಗ್ಯ ಎಂದು ಹೇಳಬೇಕಾಗಿದೆ. ಹಳ್ಳಿಯವರಿಗೆ ವಕ್ಕಲುತನಕ್ಕಾಗಿ ನಾವು ಎಷ್ಟು ಲಕ್ಷ್ಯ ಮಾಡಿದ್ದೇವೆ ಅಷ್ಟು ತ್ವರಿತ ಗತಿಯಿಂದ ಇದಕ್ಕೆ ಮಹತ್ವ ಕೊಡುತ್ತಿದ್ದೇವಲ್ಲಾ ಎಂಬುದು ಒಂದು ಆನಂದ. ಇವೊತ್ತು ವಕ್ಕಲುತನ ಒಂದು ಕೈಗಾರಿಕೆ ಅಂತ ತಿಳಿದುಕೊಂಡಿದ್ದೇನೆ. ಆದಕ್ಕೆ ಸಹಾಯ ಮಾಡಲೂ ಕೂಡ ಹೊರಟಿದ್ದೇವೆ. ಹಾಗೆ ಸಹಾಯ ಮಾಡುವಾಗ ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ. ಇವೊತ್ತು ಭೂಮಿಯನ್ನು ಫಲವತ್ತು ಮಾಡಬೇಕಾಗಿದೆ. ಅದಕ್ಕಾಗಿ ಅದರಲ್ಲಿ ಇದ್ದಂಥ ಮಣ್ಣನ್ನು ಕೊಚ್ಚಿಕೊಂಡು ಹೋಗದಂತೆ ಒಡ್ಡುಗಳನ್ನು ಕಟ್ಟಬೇಕು. ಅದರಂತೆ ಬುಲ್‌ಡೋಜರ್ಸ್, ಟ್ರ್ಯಾಕ್ಟರ್ಸ್ ಪೂರೈಕೆ ಆಗಬೇಕು. ಅದರಂತೆ ರಸಾಯನಿಕ ಗೊಬ್ಬರಗಳು ತಯಾರು ಆಗಬೇಕು. ಅದೂ ಅಲ್ಲದೆ ರೈತರಿಗೆ ಶಿಕ್ಷಣವೂ ಕೂಡ ಅಷ್ಟೇ ಅವಶ್ಯವಾದುದು. ಇವೊತ್ತಿನ ದಿವಸ ಸಾಕಷ್ಟು ರಸಾಯನಿಕ ಗೊಬ್ಬರ ಕೊಡುತ್ತಿದ್ದಾರೆ, ಸಾಕಷ್ಟು ಪೆಸ್ಟಿಸೈಡ್ಸ್ ಕೊಡುತ್ತಿದ್ದಾರೆ. ಆದರೆ ರೈತರು ಇವನ್ನು ಉಪಯೋಗಿಸುವಂಥ ಒಂದು ಶಕ್ತಿ ಪಡೆದಿದ್ದಾರೆಯೋ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಇವೊತ್ತಿನ ದಿವಸ ವಕ್ಕಲುತನಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಾ ಇದ್ದೇವೆ. ಅದು ನೇರವಾಗಿ ರೈತರಿಗೆ ಮುಟ್ಟುತ್ತದೆಯೋ ಏನು ಎನ್ನುವುದನ್ನು ವಿಚಾರ ಮಾಡಬೇಕು. ಇವೊತ್ತಿನ ದಿವಸ ಸಾಯಿಲ್ ಕನ್‌ಸರ್ವೇಷನ್ ತೆಗೆದುಕೊಂಡಿದ್ದಾರೆ. ಇದು ಉಪಯೋಗವಾಗುವಂತಹ ಸ್ಕೀಮು. ಅದೇ ವೇಳೆಯಲ್ಲಿ ಇದು ರೈತನಿಗೆ ಭಾರವಾದ ಸ್ಕೀಮು ಎಂದು ಪರಿಣಾಮವಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ; ಯಾವ ಭೂಮಿಯಲ್ಲಿ ಬಂಡಿಂಗ್ ಕೆಲಸ ನಡೆಯುತ್ತದೆ ಆ ಭೂಮಿಯ ಗುಣಗಳನ್ನು ಅವಲಂಬಿಸಿ ಭೂಮಿಯಲ್ಲಿ ಬರುವ ಉತ್ಪತ್ತಿ ಕಡೆಗೆ ಗಮನ ಕೊಡಬೇಕು. ಯಾವ ರೈತನಿಗೆ ವಾಸ್ತವವಾಗಿ ಕೊಡುವುದಕ್ಕೆ ಸಾಧ್ಯ ಇದೆ ಅಂತಹ ರೈತನಿಂದ ಬಂಡಿಂಗ್ ಫೀಸು ವಸೂಲಿ ಮಾಡಬೇಕು. ಇದನ್ನು ನ್ಯಾಷನಲ್ ವೆಲ್ತ್ ಎಂದು ಪರಿಗಣಿಸಿ ಸರ್ಕಾರದವರೇ ಬಂಡಿಂಗ್ ಮಾಡುವುದರಲ್ಲಿ ತೊಡಗಬೇಕು. ಇವೊತ್ತಿನ ದಿವಸ ಬಂಡಿಂಗ್ ಅವಶ್ಯ ಇಲ್ಲ ಎಂದು ಹೇಳುತ್ತಾ ಇಲ್ಲ. ಆದರೆ ರೈತರಿಗೆ ಭಾರವಾಗಿದೆ ಇದನ್ನು ಇಳಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ಟ್ರ್ಯಾಕ್ಟರ್ ಅವಶ್ಯಕತೆ ಬಹಳವಾಗಿದೆ. ಈಗಾಗಲೆ ನಮ್ಮ ಮುಖ್ಯ ಮಂತ್ರಿಗಳು ಹೇಳುತ್ತಾ ಇದ್ದಾರೆ, ನಮ್ಮ ದೇಶದಲ್ಲಿ ಕಾರ್ಖಾನೆಗಳಲ್ಲಿ ಇವು ತಯಾರು ಆಗುತ್ತಾ ಇದೆ ಎಂದು. ಇದು ಸಂತೋಷದ ವಿಚಾರ. ಇಷ್ಟರಿಂದಲೇ ತೃಪ್ತಿ ಪಡಬೇಕಾಗಿಲ್ಲ. ಸ್ಮಾಲ್ ಟ್ರ್ಯಾಕ್ಟರ್ಸ್ ಏನು ಇದೆ, ಅದು ಕೇವಲ ನೀರಾವರಿ ಭೂಮಿಯಲ್ಲಿ ಮರಡಿ ಅಂತಹ ಭೂಮಿಗೆ ಉಪಯೋಗವಾಗುತ್ತದೆ. ನಮಗೆ ಬೇಕಾಗಿರತಕ್ಕದ್ದು ಹೆವಿ ಟ್ರ್ಯಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್. ಇದು ಬಹಳ ಅವಶ್ಯ. ಇದಕ್ಕೆ ಫಾರಿನ್ ಎಕ್ಸ್‌ಛೇಂಜ್ ಅವಶ್ಯಕತೆ ಇದೆ ಎಂದು ಕೇಳುತ್ತಾ ಇದ್ದೇವೆ; ಇದಕ್ಕಾಗಿ ಅವುಗಳನ್ನು ತರಿಸುವುದಕ್ಕೆ ಆಗುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದಾರೆ. ಎಷ್ಟೇ ಖರ್ಚು ಬರಲಿ ಇವೊತ್ತಿನ ದಿವಸ ಮುಖ್ಯವಾಗಿ ಬೇಕಾಗಿರುವುದು ಬುಲ್‌ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್, ಅದನ್ನು ತರಿಸೋಣ. ಮುಂಬೈ ಕರ್ನಾಟಕದಲ್ಲಿ ಕೆಲವು ಟ್ರ್ಯಾಕ್ಟರುಗಳು ಇದ್ದು ಒಂದೊಂದು ಜಿಲ್ಲೆಗೆ ಟ್ರ್ಯಾಕ್ಟರ್ಸ್ ಬುಲ್‌ಡೋಜರ್ಸಿನ 2-3 ಯೂನಿಟ್ಟುಗಳು ಇದ್ದವು. ಅವು ಅಲ್ಲಿ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದವು. ರೈತರು ತಿಳಿದುಕೊಂಡಿರುವುದು ಹಳೇ ಪದ್ಧತಿಯನ್ನು ಬಿಟ್ಟು ಯಾಂತ್ರೀಕರಣ ಬೇಸಾಯ ಪದ್ಧತಿ ಮಾಡಬೇಕು, ಪ್ರತಿಫಲ ಕಣ್ಣಿಗೆ ಕಾಣುತ್ತದೆ ಎಂದು. ಆದರೆ ಟ್ರ್ಯಾಕ್ಟರ್ಸ್ ಅವ್ಯವಸ್ಥೆಯಿಂದ ರೈತರು ಕಷ್ಟಪಡುತ್ತಿದ್ದಾರೆ. ಶ್ರೀಮಂತ ಟ್ರ್ಯಾಕ್ಟರ್ಸ್ ಹೊಡೆಸಬಹುದು. ಸರ್ಕಾರದಿಂದ ಯೂನಿಟ್ ತಯಾರು ಮಾಡಿದರೆ ಸಣ್ಣ ಹಿಡುವಳಿದಾರರಿಗೆ ಯೋಗ್ಯ ಭೂಮಿಗೆ ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ ಟ್ರ್ಯಾಕ್ಟರ್ಸ್ ಯೂನಿಟ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಏರ್ಪಾಡು ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ಸ್ಮಾಲ್ ಟ್ರ್ಯಾಕ್ಟರ್ಸ್, ಪವರ್ ಟಿಲ್ಲರ್ಸ್ ಉಪಯೋಗ ಇಲ್ಲವೇ ? ಅವು ತಯಾರು ಆಗುತ್ತಾ ಇವೆಯಲ್ಲಾ?

ಶ್ರೀ ಎಸ್. ಎಂ. ಗುರೆಡ್ಡಿ.—ನೀರಾವರಿ ಭೂಮಿಯಲ್ಲಿ ಪವರ್ ಟಿಲ್ಲರ್ಸ್ ಉಪಯೋಗ ಇವೆ. ಬಿಜಾಪುರ ಜಿಲ್ಲೆಯಲ್ಲಿ ಚೌಳು ಭೂಮಿ ಇದೆ, ಇಡೀ ರಾಜ್ಯದಲ್ಲಿ ಅಂತಹ ಚೌಳು ಭೂಮಿ ಬೇರೆ ಕಡೆಯೂ ಇದೆ. ಅದಕ್ಕೆ ಒಂದು ಸ್ಕೀಮನ್ನು ಹಾಕಿಕೊಳ್ಳಬೇಕು. ಸಾಯಿಲ್ ಟೆಸ್ಟಿಂಗ್ ಲ್ಯಾಬರೋಟರಿ

ಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಿರಿ ಎಂದು ಹೇಳುತ್ತೇನೆ. ಬಿಜಾಪುರ ಪಟ್ಟಿಗೆ ಹೇಳಬೇಕಾದರೆ 25-30 ಸಾವಿರ ಎಕರೆ ಉತ್ತಮ ಭೂಮಿ ನಿರುಪಯೋಗವಾಗಿದೆ. ಇಲ್ಲಿ ರೈತ ನಿಸ್ಸಹಾಯಕನಾಗಿದ್ದಾನೆ. ಒಂದೊಂದು ಎಕರೆಯಲ್ಲಿ 10-12 ಚೀಲ ಗೋಧಿ ಬೆಳೆಯುವ ಪ್ರದೇಶ ಈಗ ಒಂದು ಹುಲ್ಲುಕಡ್ಡಿಯೂ ಕೂಡ ಬೆಳೆಯುವುದಿಲ್ಲ. ಸರ್ಕಾರದವರು ಒಂದು ಎಕರೆಗೆ 50 ರೂಪಾಯಿ ಖರ್ಚಿಗೆ ಕೊಡುತ್ತಿದ್ದಾರೆಂದು ಇಟ್ಟುಕೊಳ್ಳೋಣ. ಅಷ್ಟರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಸರ್ಕಾರದ ಭೂಮಿಯನ್ನು ನ್ಯಾಷನಲ್ ವೇಸ್ಟ್ ಎಂದು ತಿಳಿದುಕೊಳ್ಳಬೇಕು. ಇದು ಯಾರೋ ಒಬ್ಬ ಇಂಡಿವಿಜ್ಯುಯಲ್‌ದ್ದು ಎಂಬುದಾಗಿ ನಾವು ತಿಳಿದುಕೊಂಡು ಅದರ ಕಡೆಗೆ ಗಮನ ಕೊಡದೇ ಇದ್ದರೆ ಎಲ್ಲಾ ಭೂಮಿಯೂ ಇಷ್ಟರಲ್ಲೇ ನಾಶವಾಗುತ್ತದೆ. ಆದುದರಿಂದ ಸರ್ಕಾರದವರು ಒಂದು ವ್ಯವಸ್ಥೆ ಮಾಡಿ ಎಲ್ಲಿ ಚೌಳು ಭೂಮಿ ಪ್ರದೇಶ ಇದೆ ಅದನ್ನು ಫಲವತ್ತಾಗಿ ಮಾಡುವ ಒಂದು ಸ್ಕೀಮನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ರೈತ ರಸಾಯನಿಕ ಗೊಬ್ಬರದ ಆವಶ್ಯಕತೆಯನ್ನು ತಿಳಿದುಕೊಂಡಿದ್ದಾನೆ. ಅಷ್ಟರಲ್ಲೇ ಅವನು ತೃಪ್ತನಾಗುವುದಿಲ್ಲ. ಯಾವ ಪ್ರಮಾಣದಲ್ಲಿ ಗೊಬ್ಬರ ಉಪಯೋಗ ಮಾಡಬೇಕು ಎನ್ನುವ ಜ್ಞಾನದಲ್ಲಿ ಅದನ್ನು ಹೇಳಿಕೊಡುವುದು ಈಗಿನ ಸಿಬ್ಬಂದಿಯಿಂದ ಸಾಧ್ಯ ಇಲ್ಲ ಎಂದು ತಿಳಿದುಕೊಂಡಿದ್ದೇನೆ, ಒಂದೊಂದು ತಾಲ್ಲೂಕಿನಲ್ಲಿ ಒಬ್ಬೊಬ್ಬರು ಆಫೀಸರು ಇರಬಹುದು. ಪ್ರತಿಯೊಬ್ಬರೂ ಹಳ್ಳಿಯ ಪಟ್ಟಕ್ಕೆ ಹೋಗಿ ಅವರಿಗೆ ತಿಳುವಳಿಕೆ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪ್ರತಿಯೊಬ್ಬ ರೈತನಿಗೂ ಮತ್ತು ರೈತನ ಮಕ್ಕಳಿಗೂ ಯಾರು ವ್ಯವಸಾಯ ಮಾಡಲಿಕ್ಕೆ ಮುಂದೆ ಬರುತ್ತಾರೋ ಅವರ ಸಲುವಾಗಿ ತಾಲ್ಲೂಕುಗಳಲ್ಲಿ ಒಂದು ಆಗಲಿ ಎರಡು ಆಗಲಿ ಷಾರ್ಟ್‌ಟರ್ಮ್ ಕೋರ್ಸ್ ತೆರೆಯಬೇಕು. 6 ತಿಂಗಳು ಮಟ್ಟಿಗೆ ಟ್ರೇನಿಂಗ್ ಅವರಿಗೆ ಕೊಡಬೇಕು. ಯಾವಾಗ ಟ್ರಾಕ್ಟರ್ ಉಪಯೋಗ ಮಾಡಬೇಕು, ಯಾವ ಬೆಳೆಗೆ ಎಷ್ಟು ನೀರಾವರಿ ಕೊಡಬೇಕು ಎನ್ನುವ ಪ್ರಿಲಿಮಿನರಿ ಜ್ಞಾನ ಏನು ಇದೆ ಅದನ್ನು ಅವರಿಗೆ ಹೇಳಿಕೊಡುವುದು ಬಹಳ ಅವಶ್ಯ ಇದೆ. ಹಿಂದಿನ ಕಾಲದ ಬೇಸಾಯಕ್ಕೂ ಈಗಿನ ಕಾಲದ ಬೇಸಾಯಕ್ಕೂ ಅಂತರ ಇದೆ. ಇಂದಿನ ಬೇಸಾಯಕ್ಕೆ ರಾಸಾಯನಿಕ ಗೊಬ್ಬರ ಉಪಯೋಗ ಮಾಡಬೇಕು, ಕ್ರಿಮಿಕೀಟ ನಾಶಕ್ಕಾಗಿ ಉತ್ತಮ ಔಷಧಿಗಳನ್ನು ಉಪಯೋಗ ಮಾಡಬೇಕು ಅಂದಮೇಲೆ ಅಷ್ಟೇ ತೀವ್ರಗತಿ ಯಲ್ಲಿ ಇದರ ಜ್ಞಾನ ಪಡೆದುಕೊಳ್ಳಬೇಕಾಗಿದೆ. ಆದುದರಿಂದ ಷಾರ್ಟ್‌ಟರ್ಮ್ ಟ್ರೈನಿಂಗ್ ಏನು ಇದೆ ಅದು ರೈತರಿಗೆ ಆಗಲಿ ಅದರಂತೆ ಆಸಕ್ತಿ ಪಡೆದಂಥ ರೈತರ ಮಕ್ಕಳಿಗೆ ಆಗಲಿ ಕೊಡುವುದು ಬಹಳ ಹಿತ ಎಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತಿನ ದಿವಸ ಕಾಲೇಜು ವಿದ್ಯಾಭ್ಯಾಸ ಮಾಡಿದ ನಮ್ಮ ಮಕ್ಕಳು ಕೃಷಿಯಲ್ಲಿ ಪಂಡಿತರಾಗುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಯಾರು ಹೊಲ ಉಳುತ್ತಾರೋ ಅವನು ಬೇಸಾಯವನ್ನು ಸುಧಾರಣೆ ಮಾಡಿಕೊಳ್ಳಲು ಸಾಧ್ಯ ಇದೆ. ಅವನೂ ಕೂಡ ಹೆಚ್ಚು ಉತ್ಪನ್ನ ಮಾಡಬೇಕೆಂದು ಇದ್ದಾನೆ. ರೈತ ಎಚ್ಚೆತ್ತಿದ್ದಾನೆ, ಆಕರ್ಷಿತ ಬೆಲೆ ಅವನಿಗೆ ಸಿಕ್ಕುತ್ತಾ ಇದೆ. ಪ್ರತಿಯೊಬ್ಬರೂ ಒಕ್ಕಲುತನಕ್ಕೆ ಸಹಾಯ ಮಾಡ ಬೇಕೆಂದು ಇರುವಾಗ ನಾವು ಅವನ ಸಹಾಯಕ್ಕೆ ಹೋಗುವುದು ಒಳ್ಳೆಯದು. ನಮಗೆ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡುವುದು ವಿಹಿತ ಎಂದು ಅನಿಸುತ್ತದೆ.

ಇನ್ನು ಕೃಷಿ ವಿದ್ಯಾಲಯದ ಸಂಬಂಧ ಒಂದೆರಡು ಮಾತು ಹೇಳಬೇಕಾಗಿದೆ. ಇದುವರೆಗೆ ಸಂಶೋಧನೆಯನ್ನು ಅಗ್ರಿಕಲ್ಚರಲ್ ಇಲಾಖೆ ಡೈರೆಕ್ಟರು ಮತ್ತು ಇತರ ಅಧಿಕಾರಿಗಳು ಮಾಡುತ್ತಿದ್ದರು. ಅದನ್ನು ಸೀಡ್ ಫಾರಂನಲ್ಲಿ ಮಾಡುತ್ತಿದ್ದರು, ಎಕ್ಸ್‌ಪೆರಿಮೆಂಟ್ ಮಾಡುತ್ತಿದ್ದರು. ಈಗ ಅದೆಲ್ಲಾ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದೆ, ಅವರು ರಿಸರ್ಚ್ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಆದರೆ ಅವರು ಮಾಡುವ ಸಂಶೋಧನೆಗೂ ಮತ್ತು ಡೈರೆಕ್ಟರೇಟಿನಿಂದ ಮಾಡುವ ಸಂಶೋಧನೆಗೂ ಒಂದಕ್ಕೊಂದಕ್ಕೆ ತಾಳೆಯಿಲ್ಲ. ಆದಕಾರಣ ಡೈರೆಕ್ಟರು ಯಾವ ಪ್ರಕಾರ ರಿಸರ್ಚ್ ಮಾಡುವುದಕ್ಕೆ ಹೇಳಿದ್ದಾರೋ ಅದೇ ಪ್ರಕಾರ ಮಾಡಬೇಕು ಮತ್ತು ಪ್ರತಿಯೊಂದೂ ರಿಸರ್ಚ್ ಆದ ಮೇಲೆ ಆ ಭಾಗದ ರೈತರಿಗೆ ಅದನ್ನು ತೋರಿಸುವ ಏರ್ಪಾಡು ಮಾಡಬೇಕು. ಈ ದಿವಸ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿರುವ ಸಿಬ್ಬಂದಿ ರೈತನ ಸಲುವಾಗಿ ಕೆಲಸ ಮಾಡಬೇಕು. ಅವನಿಗೆ ಸಹಾಯ ಮಾಡಬೇಕು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಯಾವ ಕಾಲೇಜಿನ ಪ್ರೊಫೆಸ ರಾದರೂ ಆಗಲಿ ಅವರು ರೈತರಿಗೆ ಸಹಾಯಕರಾಗಿರಬೇಕು. ಇಲ್ಲಿಯವರೆಗೆ ಯಾವ ರೀತಿ ನಮ್ಮ ವ್ಯವಸಾಯ ನಡೆಯುತ್ತಿತ್ತೋ ಆ ರೀತಿ ಈಗ ನಡೆಯುತ್ತಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ಈಗಾಗಲೇ ಶ್ರೀಮಾನ್ ಎಂ. ಆರ್. ಪಾಟೀಲರು ಹತ್ತಿ ಬೆಳೆ ವಿಚಾರ ಹೇಳುತ್ತಿದ್ದರು. ಜಯಧರ, ಲಕ್ಷ್ಮಿ, ಸುಯೋಧರ ಮುಂತಾದ ಹತ್ತಿ ಕಾಳುಗಳು ಶಕ್ತಿಯನ್ನು ಕಳೆದುಕೊಂಡಿವೆ. ಅವುಗಳನ್ನು ಉಪ ಯೋಗಮಾಡಿದರೆ ಸರಿಯಾಗಿ ಫಲಕಾರಿಯಾಗುವುದಿಲ್ಲ. ಪ್ರತಿಯೊಂದು ವರ್ಷ ನೋಡಿ ನಮಗೆ ಇದು

(ಶ್ರೀ ಎಸ್. ಎಂ. ಗುರೆಡ್ಡಿ)

ಅನುಭವಕ್ಕೆ ಬಂದಿದೆ. ಇದಕ್ಕೆ ಕಾರಣ ಡಿಫೆಕ್ಟಿವ್ ರಿಸರ್ಚ್ ಇರಬಹುದು. ಈಗ ಇದನ್ನು ಉಪಯೋಗಮಾಡಿದರೆ ಭೂಮಿಯಲ್ಲಿ ಉತ್ಪತ್ತಿ ಕೂಡ ಹೆಚ್ಚಾಗುವುದಿಲ್ಲ. ಬೀಜ ಭೂಮಿಗೆ ಹಾಕಿದರೆ ಸತ್ತು ಹೋಗುತ್ತದೆ, ಕಳೆದ ನಾಲ್ಕೈದು ವರ್ಷಗಳಿಂದ ಪ್ರತಿ ವರ್ಷ ರೋಗಗಳಿಗೆ ಗುರಿಯಾಗುತ್ತಿದೆ. ವ್ಯವಸಾಯದ ಇಲಾಖೆ ಅಥವಾ ಬೇರೆಯವರು ಹೆಚ್ಚಾಗಿ ಬೀಜವನ್ನು ಪರಿವರ್ತನೆ ಮಾಡುವುದಕ್ಕೆ ಮನಸ್ಸು ಮಾಡಬೇಕು, ಈಗ ಹಾನಿಯಾಗುತ್ತಿದೆ. ಇಲ್ಲಿಯವರೆಗೆ ಮುಂಗಾರು ಮಳೆಯಲ್ಲಿ ಬೆಳೆಯು ರೋಗಕ್ಕೆ ಗುರಿಯಾಯಿತು, ಬೀಜ ಬಿಡಿಸುವುದಕ್ಕೆ ತೊಂದರೆಯಾಯಿತು.

ಇನ್ನೊಂದು ಪೆಸ್ಟಿಸೈಡ್ಸ್ (pesticides) ವಿಚಾರ. ಈ ಸಲ ಕೋಳಿಹುಳ ಬಿದ್ದು ನಮ್ಮ ಹೊಲಗಳಲ್ಲಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ, ಸಂಬಂಧಪಟ್ಟವರಿಗೆ ವಿಚಾರ ತಿಳಿಸಿದರೂ ಕೂಡ ಇದುವರೆಗೆ ಆ ಸಂಬಂಧದಲ್ಲಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದುದರಿಂದ ರೈತರು ಶೇಂಗ ಬೆಳೆಯುವುದು ಮೇಲು ಎಂಬ ಭಾವನೆ ಪಡೆಯುತ್ತಿದ್ದಾರೆ. ಯಾರೂ ಬಂದು ಪರಿಶೀಲನೆ ಮಾಡಲಿಲ್ಲ ನಮ್ಮ ಭಾಗದ ಹತ್ತಿ ಬೆಳೆ ಹುಳುಗಳ ಕಾಟದಿಂದ ನಷ್ಟವಾಗಿವೆ ಎಂದು ಹೇಳುತ್ತಿದ್ದಾರೆ. ನಾನು ಇದನ್ನು ಸಂಬಂಧಪಟ್ಟವರಿಗೆ ತಿಳಿಸಿದರೂ ಕೂಡ ಯಾವ ಕ್ರಮವನ್ನೂ ಅಧಿಕಾರಿಗಳು ಕೈಕೊಂಡಿಲ್ಲದಿರುವುದರಿಂದ ಪುನಃ ರೈತರು ಏನು ಮಾಡಿದಿರಿ ಎಂದು ನನ್ನನ್ನು ಕೇಳಿದಾಗ ನಾನು ಜವಾಬು ಕೊಡಲಾರದೆ ನಿರುತ್ತರನಾಗಿ ವಾಪಸು ಬರಬೇಕಾಯಿತು. ಹೀಗಾಗುವುದಕ್ಕೆ ಅವಕಾಶ ಕೊಡಬಾರದು. ಯಾವ ರೀತಿ ಕಾಲರ ತಡೆಗಟ್ಟಲು ಬೇಕಾದ ಸಿಬ್ಬಂದಿ ಇಟ್ಟು ಜೀಪುಗಳು ಬೇಕಾದ ಮೆಷಿನರಿ ಮುಂತಾದುವನ್ನಿಟ್ಟು ಕೆಲಸಮಾಡುತ್ತಿರುವರೋ ಅದೇ ರೀತಿಯಲ್ಲಿ ಬೆಳೆಗೆ ಅನುಕೂಲವಾಗುವಂತೆ ಇಟ್ಟು ಮಳೆ ಬಂದ ತಕ್ಷಣ ಹೊಲಗಳ ಬಳಿಗೆ ಹೋಗಿ ರೋಗ ಬಂದಿದ್ದರೆ ವಿಚಾರ ಮಾಡಿ ಅದು ತೊಂದರೆಮಾಡದಂತೆ ಹರಡದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ಏರಿಯಲ್ ಸ್ಪ್ರೇ ವಗೈರೆ ಮಾಡಲು ರೊಕ್ಕ ಕೊಡಬೇಕೆಂದು ರೈತರಿಗೆ ಹೇಳುತ್ತಾರೆ. ಅದರ ಯಾರೂ ಕೊಡಲು ಮುಂದೆ ಬರುವುದಿಲ್ಲ. ಇದರಿಂದ ರೋಗ ಹೋಗುವುದಿಲ್ಲ, ಪರಿಣಾಮ ಒಳ್ಳೆಯದಾಗುವುದಿಲ್ಲ. ಇದಕ್ಕೆ ಪ್ರತಿ ವರ್ಷವೂ ಕೂಡ ಜನರಿಗೆ ನಂಬಿಕೆ ಬರುವಂತೆ ಪುಕ್ಕಟ್ಟೆ ಸ್ಪ್ರೇ ಮಾಡಬೇಕು, ರೈತರಿಗೆ ಅದರಿಂದ ಅನುಕೂಲವಾಗುತ್ತದೆಂಬ ನಂಬಿಕೆ ಬಂದರೆ ಅವರೇ ಅದರ ಖರ್ಚನ್ನು ಕೊಡುತ್ತಾರೆ. ಆದುದರಿಂದ ರೋಗ ನಿವಾರಣೆಗೆ ಖಾಯಂ ಸಿಬ್ಬಂದಿಯನ್ನು ಇಡಲೇಬೇಕು. ರೈತರು ಮೊದಲು ಒಪ್ಪುವುದಿಲ್ಲ. ಒಬ್ಬ ಶ್ರೀಮಂತನಾದ ರೈತ ಖರ್ಚು ಕೊಟ್ಟು ಸ್ಪ್ರೇ ಮಾಡಿಸಿದರೆ ಅವನ ಹೊಲದಲ್ಲಿದ್ದ ರೋಗ ಇನ್ನೊಂದು ಹೊಲಕ್ಕೆ ಹರಡುತ್ತದೆ. ಆದಕಾರಣ ಖಾಯಂ ಸಿಬ್ಬಂದಿಯನ್ನಿಟ್ಟು ಬರುವ ರೋಗಗಳನ್ನು ನಿವಾರಣೆಮಾಡಲು ಸೂಕ್ತ ಕ್ರಮ ಕೈಕೊಳ್ಳಬೇಕು. ಹಿಂಗಾರಿಯಲ್ಲೂ ಕೂಡ ರೈತರಿಗೆ ನೀವೇ ಮಾಡಿಕೊಳ್ಳಿ ಎಂದು ಹೇಳಿದೆ ಶಕ್ಯ ಸಿಬ್ಬಂದಿ ಇಟ್ಟು ಬೇಕಾದ ಕೆಲಸಮಾಡಿಸಿ ಎಲ್ಲಾ ಆದಮೇಲೆ ಬರಬೇಕಾದ್ದನ್ನು ವಸೂಲು ಮಾಡಿಕೊಳ್ಳಬೇಕು. ಹತ್ತಿಬೆಳೆಗೆ 3-4 ಸಲ ಸ್ಪ್ರೇ ಮಾಡಬೇಕು, ಬೆಳೆ ಕಾಪಾಡುವುದು ಮುಖ್ಯ. ಹೊರದೇಶದಿಂದ ಅರಳೆ ತರಿಸಿ ರೈತರ ಹೊಲಗಳಿಗೆ ಸ್ಪ್ರೇ ಮಾಡಲು ರೊಕ್ಕ ಕೊಡಬೇಕೆಂದು ಹೇಳುವುದು ಸರಿಯಲ್ಲ. ಇಂದು ಹತ್ತಿ ತರಿಸಲು ಕೋಟಿಗಟ್ಟಲೆ ಖರ್ಚಾಗುತ್ತಿದೆ. ಹಾಗಿರುವಾಗ ಪೆಸ್ಟಿಸೈಡ್ಸ್ ಸಲುವಾಗಿ ಏರಿಯಲ್ ಸರ್ವೆಮಾಡಲು ಖರ್ಚು ಮಾಡುವುದು ನಿರರ್ಥಕವಲ್ಲ. ಇದು ಸರಕಾರದ ಜವಾಬ್ದಾರಿ ಎಂದು ತಿಳಿದು ಒಂದೆರಡು ವರ್ಷಗಳಾದರೂ ಕೂಡ ರೈತರಿಗೆ ಸಹಾಯ ಮಾಡಬೇಕು.

ಇನ್ನೊಂದು, ಮೆಕ್ಕೆ ಜೋಳ. ನಮ್ಮ ದೇಶಕ್ಕೆ ಹೈಬ್ರೀಡ್ ಜೋಳ ಬಂದಮೇಲೆ ಮೆಕ್ಕೆ ಜೋಳದ ಬೆಳೆ ಹೆಚ್ಚಾಗುತ್ತಿದೆ. ಆದರೆ ಪ್ರೆಸ್ಸಿಂಗ್ ಫ್ಯಾಕ್ಟರಿ ನಮ್ಮ ರಾಜ್ಯದಲ್ಲಿಲ್ಲ. ಅದಿದ್ದರೆ ನಾನಾ ಕೆಲಸಗಳಿಗೆ ಸಹಾಯವಾಗುವುದರಿಂದ ಒಂದು ಫ್ಯಾಕ್ಟರಿ ತೆಗೆಯುವುದು ಒಳ್ಳೆಯದು ಈಗ ಹೆಚ್ಚು ರೈತರು ಇದನ್ನು ಬೆಳೆಯುತ್ತಿದ್ದಾರೆ, ಫ್ಯಾಕ್ಟರಿಯು ಅನುಕೂಲಮಾಡಿದರೆ ಹೆಚ್ಚು ಉತ್ಪತ್ತಿ ಮಾಡಲು ಸಾಧ್ಯವಾಗುವುದು. ಆದುದರಿಂದ ಈ ವಿಚಾರದಲ್ಲಿ ಗಮನಹರಿಸಬೇಕು.

ಇನ್ನು ಸಾಮಾನ್ಯ ಆಡಳಿತದ ವಿಷಯದಲ್ಲಿ ಈಗಾಗಲೇ ಸಾಕಷ್ಟು ಜನರು ಮಾತನಾಡಿದ್ದಾರೆ. ಇಲ್ಲಿ ಸಾಮಾನ್ಯ ಆಡಳಿತ ಬಹಳ ಚುರುಕಾಗಿ ನಡೆಯುತ್ತಿದೆ. ಆದರೆ ಅದು ಯಾವ ಮಟ್ಟಕ್ಕೆ ಬರಬೇಕಾಗಿತ್ತೋ ಆ ಮಟ್ಟಕ್ಕೆ ಬಂದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಇಂದು ಜನಸಾಮಾನ್ಯರಿಗೆ ಅನುಕೂಲವಾಗುವಂಥ ಸಾಮಾನ್ಯ ಆಡಳಿತ ಬೇಕೇ ವಿನಾ ಕೇವಲ ಪ್ರಭಾವವುಳ್ಳವರ ಕೆಲಸವಾದರೆ ಮಾತ್ರ ಬೇಗ ಆಗುತ್ತದೆ ಎಂಬ ಭಾವನೆ ಬರಲು ಅವಕಾಶವಾಗಬಾರದು.

ಪ್ರತಿಯೊಬ್ಬರೂ ಕೂಡ ಹಳ್ಳಿಯಿಂದ ವಿಧಾನ ಸೌಧದ ಬಳಿಗೆ ಬಂದ ಹೊರತು ಯಾವ ಕೆಲಸವೂ ಆಗುವುದಿಲ್ಲ ಎಂಬ ಭಾವನೆ ಈ ದಿವಸ ಎಲ್ಲರಲ್ಲೂ ಇದೆ, ಹಾಗೆ ಬಂದ ಹೊರತು ಫೈಲು ಮೂವ್ ಆಗುವುದಿಲ್ಲ ಎಂಬ ಭಾವನೆ ಇವೆ. ನಿಜವಾಗಿಯೂ ಕೂಡ ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದನ್ನು ತಪ್ಪಿಸಿ ಕಾಗದ ಬಂದ ತಕ್ಷಣ ನಾಲ್ಕೈದು ದಿವಸಗಳಲ್ಲಿ ಅದು ವಿಲೇ ಆಗುವಂತೆ ಏರ್ಪಾಡು ಮಾಡುವುದು ವಿಹಿತ. ಇದುವರೆಗೆ ಮಾತನಾಡಿದವರು ನಿಧಾನವಾಗುವುದಕ್ಕೆ ಕಾರಣ ಮಾತ್ರ ಹೇಳಿದ್ದಾರೆಯೇ ಹೊರತು ಇನ್ಯಾವ ಲೋಪದೋಷಗಳೂ ಇಲ್ಲ.

ಆಮೇಲೆ ಕೈಗಾರಿಕೆ ವಿಷಯವನ್ನು ಸಿದ್ಧವೀರಪ್ಪನವರು ಹೇಳಿದ್ದಾರೆ. ಮೈಸೂರು ಕೈಗಾರಿಕೆಯಲ್ಲಿ ಹಿಂದೆ ಹೆಸರುವಾಸಿಯಾಗಿದ್ದುದು ನಿಜ, ಆ ಹೆಸರು ಅಳಿಸಿ ಹೋಗಿಲ್ಲ. ಆದರೆ ವಿಶಾಲ ಮೈಸೂರಾದಮೇಲೆ ಪ್ರಗತಿ ಸರಿಯಾಗಿ ಆಗಿಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಹಿಂದೆ ಕೈಗಾರಿಕೆ ವಿಚಾರವಲ್ಲಿ ಮೈಸೂರು ಏನು ಹೆಸರು ಗಳಿಸಿತ್ತೋ ಅದು ಇಂದು ಅಳಿಸಿಹೋಗುತ್ತಿದೆ.

12-30 P.M.

ಶ್ರೀ ಎಸ್. ಎಂ. ಗುರೆಡ್ಡಿ.—ಯಾರಿಗೇ ಆಗಲಿ, ಒಳ್ಳೆಯ ಹೆಸರನ್ನು ಅಳಿಸಬೇಕೆಂಬ ಭಾವನೆ ಇಲ್ಲ. ಆದರೆ ಇಲ್ಲಿಯವರೆಗೂ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಲು ಸಾಧ್ಯವಾಗಲಿಲ್ಲ ವೆಂದು ತಿಳಿದುಕೊಂಡು ಮಾತನಾಡುತ್ತಿದ್ದೀರಿ. ಇವತ್ತಿನವರೆಗೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇತ್ತು. ವಿದ್ಯುಚ್ಛಕ್ತಿಯ ಕೊರತೆಯನ್ನು ಪೂರೈಸದೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಹೇಗೆ? ಇವತ್ತು ಪವರ್ ಇದೆ. ಎಷ್ಟೋ ಕೈಗಾರಿಕೆಗಳನ್ನು ಸ್ಥಾಪನೆ ಮಾಡ ಬೇಕೆಂದು ಹೊರಟಿದ್ದಾರೆ. ಎಷ್ಟೋ ಉದ್ದಿಮೆದಾರರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡುವುದು ನಮ್ಮ ಕರ್ತವ್ಯ. ಕೈಗಾರಿಕೆ ಗಳಾಗಲಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ರಾಜ್ಯದ ಕೈಗಾರಿಕೆಗಳ ವಿಷಯವಾಗಿ ಹೇಳುವುದಾದರೆ, ಯಾವ ಕೈಗಾರಿಕೆಗಳಾಗಲಿ, ಕೆಲವೊಂದು ಸಮಯದಲ್ಲಿ ಲುಕ್ಸಾನು ಆಗಿ ಬರುತ್ತದೆ. ಇದಕ್ಕೆ ಯಾರು ಹೊಣೆ? ವಾತಾವರಣವೇ ಹೊಣೆಯಾಗಿರುತ್ತದೆ. ಅದೇ ರೀತಿ ಉಕ್ಕಿನ ಕಾರ್ಖಾನೆ ಮೊದಲಾದ ಪ್ರಗತಿಪರ ಕಾರ್ಖಾನೆಗಳೂ ಇವೆ. ಆದ್ದರಿಂದ ಯಾವ ಕಾರ್ಖಾನೆ ಯನ್ನು ತೆಗೆದುಕೊಂಡರೂ, ಈ ರೀತಿ ಜನರಲೈಸ್ ಮಾಡುವುದು ಅಷ್ಟು ಸಮಂಜಸವಲ್ಲ.

ಇನ್ನು ಕೈಗಾರಿಕೆಗಳನ್ನು ಕೇಂದ್ರೀಕರಿಸುವುದು ವಿಹಿತವಲ್ಲವೆಂದು, ಮಾನ್ಯ ಮುಖ್ಯ ಮಂತ್ರಿಯವರು ಪ್ರಶ್ನೋತ್ತರ ಕಾಲದಲ್ಲಿ ಹೇಳಿದ್ದಾರೆ. ಇವತ್ತು ಕೈಗಾರಿಕೆಗಳಲ್ಲಿ ಯಾವುದು ಹಿಂದುಳಿದಿವೆಯೋ, ಅಂಥ ಕಡೆ ಸಿಗುವಂತಹ ಕಚ್ಚಾ ಮಾಲನ್ನು ಉಪಯೋಗಿಸಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಅದು ಬಿಟ್ಟು ಎಲ್ಲಾ ಕೈಗಾರಿಕೆಗಳನ್ನೂ ಕೇವಲ ಬೆಂಗಳೂರಿನಲ್ಲೇ ಮಾಡುವುದು ಸರಿಯಲ್ಲ. ಏಕೆಂದರೆ, ಕಲಿತವರೆಲ್ಲಾ ಉದ್ಯೋಗಕ್ಕೋಸ್ಕರ ಬೆಂಗಳೂರಿನಲ್ಲೇ ಬಂದು ಕೂತರೆ ಅದೊಂದು ಸಮಸ್ಯೆಯಾಗಿ ಪರಿಣಮಿಸಬಹುದು. ಆದ್ದರಿಂದ ಪ್ರತಿಯೊಂದು ಜಿಲ್ಲೆಯೊಳಗೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಾರಂಭ ಮಾಡಬೇಕು. ಇವತ್ತು ಬಿಜಾಪುರದಲ್ಲಿ ಒಂದು ಸ್ಪಿನಿಂಗ್ ಮಿಲ್ ಮಾಡಬೇಕೆಂದು ಹೊರಟಿದ್ದಾರೆ. ಈಗಾಗಲೇ ಕಟ್ಟಡ ಕಟ್ಟಿದ್ದಾರೆ, ಫಾರಿನ್ ಮೆಷಿನರಿ ತರಿಸಿದ್ದಾರೆ. ಆದರೆ ಇನ್ನೂ ಕಾರ್ಯಗತವಾಗಲಿಕ್ಕೆ ಏನೇನು ಕೊರತೆ ಇದೆ ಎಂಬುವನ್ನು ಸರ್ಕಾರಕ್ಕೆ ಹೇಳಿಕೊಂಡಿದ್ದಾರೆ. ಅದರ ಪೂರೈಕೆ ಇನ್ನೂ ಆಗಿಲ್ಲ; ಮತ್ತು ಹೀಗೆ ಬಿಟ್ಟರೆ, ಗುಲ್ಬರ್ಗ ಮಿಲ್ಲಿನ ಹಾಗೆ ಆಗುತ್ತದೆ; ಮತ್ತು ಇನ್ನು ಮುಂದೆ ಹೇಳುವುದಾದರೆ, ನಮ್ಮ ಟೆಕ್ಸ್‌ಟೈಲ್ ಕೈಗಾರಿಕೆಗಳು ಲಾಸ್‌ನಲ್ಲಿ ಇದ್ದಾಗ್ಯೂ ನಾವು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಈಗಿನ ಸಮಯಕ್ಕೆ ಸರಿಯಾಗಿ ಮಾಡಬೇಕೆಂದು ತಿಳಿದುಕೊಂಡು, ಕೈಗಾರಿಕೆಗಳಿಗೆ ಹೆಚ್ಚಾಗಿ ಆಸ್ಪದ ಕೊಡಬೇಕು.

ಇನ್ನು ಸಿಮೆಂಟ್ ಕಾರ್ಖಾನೆಗಳ ವಿಷಯ. ನಮ್ಮ ರಾಜ್ಯದಲ್ಲಿ 3-4 ಸಿಮೆಂಟ್ ಕಾರ್ಖಾನೆ ಗಳು ಹೊಸದಾಗಿ ಮಾಡಬೇಕೆಂದಿದ್ದಾರೆ. ನಗರದಾಳಿ ಮತ್ತು ಸೇಡಂನಲ್ಲೂ ಮಾಡಬೇಕೆಂದಿದ್ದಾರೆ. ಇವತ್ತಿನ ದಿವಸ ಯಾವ ಪ್ರದೇಶ ಆರ್ಥಿಕವಾಗಿ ಹಿಂದುಳಿದಿದೆಯೋ, ಅಂಥ ಪ್ರದೇಶಗಳಲ್ಲಿ, ಕಚ್ಚಾ

(ಶ್ರೀ ಎಸ್. ಎಂ. ಗುರೆಡ್ಡಿ)

ಮಾಲುಗಳನ್ನು ಉಪಯೋಗಿಸಿ ಒಂದೊಂದು ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet again on 24th July 1967 at 1-00 P.M.

The House adjourned at Thirty-five Minutes past Tweleve of the Clock to meet again at One of the Clock on Monday, the 24th July 1967.